# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 819**
**ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ),**
**ಉತ್ತರಿಸಬೇಕಾದ ದಿನಾಂಕ : 13.03.2025.**
**ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 10 ವರ್ಷಗಳಲ್ಲಿ ಪೊಲೀಸ್ ವಶದಲ್ಲಿದ್ದಾಗ ಅಥವಾ ಜೈಲಿನಲ್ಲಿದ್ದಾಗ ಮೃತಪಟ್ಟ ಖೈದಿಗಳು /ವಿಚಾರಣಾಧೀನ ಖೈದಿಗಳ (ಆರೋಪಿಗಳ) ಸಂಖ್ಯೆ ಎಷ್ಟು; (ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿ ನೀಡುವುದು) | ಕಳೆದ 10 ವರ್ಷಗಳಲ್ಲಿ ಪೊಲೀಸ್ ವಶದಲ್ಲಿದ್ದಾಗ ಒಟ್ಟು 367 ಆರೋಪಿತರು ಮೃತಪಟ್ಟಿರುತ್ತಾರೆ. ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.<br><br>ಕಳೆದ 10 ವರ್ಷಗಳಲ್ಲಿ ರಾಜ್ಯದ ಕಾರಾಗೃಹಗಳಲ್ಲಿ ಒಟ್ಟು 769 ಖೈದಿಗಳು ಮೃತಪಟ್ಟಿರುತ್ತಾರೆ. ವಿವರವನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |
| ಆ | ಖೈದಿಗಳ ನಡುವಿನ ಘರ್ಷಣೆ ಆತ್ಮಹತ್ಯೆ, ಅಸಹಜ ಸಾವು ಪ್ರಕರಣಗಳಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು; ಸಾವಿಗೆ ಕಾರಣಗಳೇನು; (ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿ ನೀಡುವುದು) | ರಾಜ್ಯದ ಕಾರಾಗೃಹಗಳಲ್ಲಿ ದಿನಾಂಕ: 01.01.2014 ರಿಂದ 06.03.2025ರ ವರೆಗಿನ ಅವಧಿಯಲ್ಲಿ ಬಂದಿಗಳ ನಡುವಿನ ಘರ್ಷಣೆ, ಆತ್ಮಹತ್ಯೆ, ಕಾರಣ ಗೊತ್ತಿಲ್ಲದ ಸಾವು ಪ್ರಕರಣಗಳಲ್ಲಿ ಮೃತಪಟ್ಟಿರುವ ಬಂದಿಗಳ ವಿವರ ಈ ಕೆಳಕಂಡಂತಿದೆ. ಅಂಕಿ-ಅಂಶಗಳ ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br><br>**ಘರ್ಷಣೆ** / **ಆತ್ಮಹತ್ಯೆ** / **ಕಾರಣ ಗೊತ್ತಿಲ್ಲದ** / **ಒಟ್ಟು**<br>03 / 90 / 79 / 172 |
| ಇ | ಕಸ್ಟಡಿಯಲ್ಲಿದ್ದಾಗ (Custodial Death) ಮೃತಪಟ್ಟ ಆರೋಪಿ ಅಥವಾ ಖೈದಿಗಳ ಪ್ರಕರಣಗಳಲ್ಲಿ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಕ್ರಮ ಜರುಗಿಸಲಾಗಿದೆಯೇ; (ವಿವರ ನೀಡುವುದು) | ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ಕಸ್ಟಡಿಯಲ್ಲಿದ್ದಾಗ (Custodial Death) ಮೃತಪಟ್ಟ ಆರೋಪಿ ಅಥವಾ ಖೈದಿಗಳ ಪ್ರಕರಣಗಳಲ್ಲಿ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಕ್ರಮ ಜರುಗಿಸಲಾದ ವಿವರವನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.<br><br>ಕಾರಾಗೃಹ ಇಲಾಖೆಗೆ ಸಂಬಂಧಿಸಿದಂತೆ ಕಳೆದ 10 ವರ್ಷಗಳ ಅವಧಿಯಲ್ಲಿ ಬಂದಿಗಳು ನ್ಯಾಯಾಂಗ ಬಂಧನದಲ್ಲಿದ್ದಾಗ ಬಂದಿಗಳ ನಡುವಿನ ಘರ್ಷಣೆ, ಆತ್ಮಹತ್ಯೆ ಹಾಗೂ ಅಸಹಜ ಸಾವುಗಳ ಒಟ್ಟು 47 |

| | | |
|---|---|---|
| | | ಪ್ರಕರಣಗಳಲ್ಲಿ ಕರ್ತವ್ಯಲೋಪ ಕಂಡುಬಂದ ಒಟ್ಟು 111 ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗಿದೆ. ವಿವರವನ್ನು ಅನುಬಂಧ-4ರಲ್ಲಿ ಒದಗಿಸಲಾಗಿದೆ. |
| ಈ | ಖೈದಿ ಅಥವಾ ವಿಚಾರಣಾಧೀನ ಖೈದಿಗಳ ಅಸಹಜ ಸಾವುಗಳಿಗೆ ಅವರ ಅವಲಂಬಿತರಿಗೆ ಅಥವಾ ರಕ್ತ ಸಂಬಂಧಿಗಳಿಗೆ ನೀಡಲಾಗುವ ಪರಿಹಾರದ ಮೊತ್ತ ಎಷ್ಟು; ಕಳೆದ 10 ವರ್ಷಗಳಲ್ಲಿ ಸಂತ್ರಸ್ತ ಕುಟುಂಬಗಳಿಗೆ ನೀಡಿದ ಒಟ್ಟು ಪರಿಹಾರ ಮೊತ್ತ ಎಷ್ಟು; | ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ, ಕಳೆದ 10 ವರ್ಷಗಳಲ್ಲಿ ಖೈದಿ ಅಥವಾ ವಿಚಾರಣಾಧೀನ ಕೈದಿಗಳ ಅಸಹಜ ಸಾವುಗಳಿಗೆ ಅವರ ಅವಲಂಬಿತರಿಗೆ ಅಥವಾ ರಕ್ತ ಸಂಬಂಧಿಗಳಿಗೆ ಒಟ್ಟು ರೂ. 1,40,48,000/ಗಳ ಪರಿಹಾರ ಮೊತ್ತವನ್ನು ಪಾವತಿಸಲಾಗಿದೆ.<br><br>ಮುಂದುವರೆದು, ಕಾರಾಗೃಹ ಇಲಾಖೆಯಿಂದ ವಿಚಾರಣಾಧೀನ / ಶಿಕ್ಷಾ ಬಂದಿಗಳ ಅಸಹಜ ಸಾವುಗಳಿಗೆ ಅವರ ಅವಲಂಬಿತರಿಗೆ ಅಥವಾ ರಕ್ತ ಸಂಬಂಧಿಗಳಿಗೆ ದಿನಾಂಕ: 06.03.2025 ರವರೆಗೆ ಒಟ್ಟು ರೂ. 2,94,47,797-00 ಗಳ ಪರಿಹಾರ ಮೊತ್ತವನ್ನು ಪಾವತಿಸಲಾಗಿರುತ್ತದೆ. |
| ಉ | ಕಾರಾಗೃಹಗಳ ಸುಧಾರಣೆಗೆ ಇತ್ತೀಚಿನ ವರ್ಷಗಳಲ್ಲಿ ಕೈಗೊಂಡಿರುವ ಪ್ರಮುಖ ಸುಧಾರಣೆಗಳು ಯಾವುದು ? | - ಬಂದಿಗಳ ದಟ್ಟಣೆ ಕಡಿಮೆ ಮಾಡುವ ಸಲುವಾಗಿ ವಿಜಯಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ಒಟ್ಟು 2000 ಬಂದಿಗಳ ಸಾಮರ್ಥ್ಯದ ನೂತನ ಕೇಂದ್ರ ಕಾರಾಗೃಹಗಳ ನಿರ್ಮಾಣ ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ.<br>- ಕಾರಾಗೃಹದಲ್ಲಿ ದಾಖಲಾಗುವ ಅತಿಭದ್ರತಾ ಬಂದಿಗಳನ್ನು ಪ್ರತ್ಯೇಕಿಸುವ ಸಂಬಂಧ ಬೆಂಗಳೂರಿನಲ್ಲಿ ಗರಿಷ್ಠ ಭದ್ರತೆ ಕಾರಾಗೃಹ ಮತ್ತು ಮಂಗಳೂರು ಕೇಂದ್ರ ಕಾರಾಗೃಹವನ್ನುಒಟ್ಟು 2000 ಬಂದಿಗಳ ಸಾಮರ್ಥ್ಯದ ನೂತನ ಕೇಂದ್ರ ಕಾರಾಗೃಹಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ.<br>- ಅರಸೀಕೆರೆ, ಹಳಿಯಾಳ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ನೂತನ ತಾಲ್ಲೂಕು ಕಾರಾಗೃಹಗಳ ನಿರ್ಮಾಣ ಕಾಮಗಾರಿಗಳು ಮುಕ್ತಾಯಗೊಂಡಿರುತ್ತದೆ.<br>- ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯಲ್ಲಿ 600 ಬಂದಿಗಳ ಸಾಮರ್ಥ್ಯದ ಕೇಂದ್ರ ಕಾರಾಗೃಹ ನಿರ್ಮಾಣ ಸಂಬಂಧ ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದ್ದು, ಕಾರ್ಯಾದೇಶ ನೀಡಲು ಕ್ರಮವಹಿಸಲಾಗುತ್ತಿದೆ.<br>- ಕರ್ನಾಟಕ ಅಕಾಡೆಮಿ ಆಫ್ ಪ್ರಿಸನ್ಸ್ ಅಂಡ್ ಕರಕ್ಷನಲ್ ಸರ್ವಿಸಸ್ ಬೆಂಗಳೂರು ಸಂಸ್ಥೆಯ ಕಟ್ಟಡದ ನಿರ್ಮಾಣ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಸದರಿ ಸಂಸ್ಥೆಯಲ್ಲಿ ಅಧಿಕಾರಿ |

| | | |
|---|---|---|
| | | ಸಿಬ್ಬಂದಿಗಳಿಗೆ ಆಡಳಿತ ಮತ್ತು ಕರ್ತವ್ಯ ನಿರ್ವಹಣೆ ಕುರಿತು ಆಧುನಿಕ ಮಾದರಿಯ ತಾಂತ್ರಿಕ ಮತ್ತು ವೈಜ್ಞಾನಿಕ ಮಾದರಿಯ ತರಬೇತಿ ನೀಡಲು ವ್ಯವಸ್ಥೆ ಕಲ್ಪಿಸಲಾಗುವುದು.<br>- ಕರ್ನಾಟಕ ಕಾರಾಗೃಹ ಕೈಪಿಡಿ, 1978 ಅನ್ನು ಕೇಂದ್ರ ಗೃಹ ಮಂತ್ರಾಲಯದ ಮಾದರಿ ಕಾರಾಗೃಹ ಕೈಪಿಡಿ, 2016 ರನ್ವಯ ಪರಿಷ್ಕರಿಸಿ ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವಾ ಕೈಪಿಡಿ, 2021 ಅನ್ನು ಅಳವಡಿಸಿಕೊಳ್ಳಲಾಗಿದೆ.<br>- ಕಾರಾಗೃಹಗಳ ಕಾರ್ಖಾನೆಗಳ ಉನ್ನತೀಕರಣ ಹಾಗೂ ಬಂದಿಗಳ ಕೌಶಲ್ಯ ಹೆಚ್ಚಿಸುವ ಸಂಬಂಧ' ಕಾರಾಗೃಹ ಅಭಿವೃದ್ಧಿ ಮಂಡಳಿ 2021' ಸ್ಥಾಪಿಸಲಾಗಿರುತ್ತದೆ.<br>- ಬೆಂಗಳೂರು, ಧಾರವಾಡ, ಬೆಳಗಾವಿ ಮತ್ತು ಬಳ್ಳಾರಿ ಕೇಂದ್ರ ಕಾರಾಗೃಹಗಳಲ್ಲಿ ಪೆಟ್ರೋಲ್ ಬಂಕ್ ನಿರ್ಮಾಣ ಮಾಡಲು ಕ್ರಮ ವಹಿಲಾಗುತ್ತಿದೆ. ಅದರಿಂದ ಬಂದ ಆದಾಯವನ್ನು ಕಾರಾಗೃಹ ಅಭಿವೃದ್ಧಿ ಮಂಡಳಿಗೆ ಜಮಾ ಮಾಡಿ ಕಾರಾಗೃಹಗಳ ಅಭಿವೃದ್ಧಿಗಾಗಿ ಅನುದಾನ ಬಳಸಿಕೊಳ್ಳಲಾಗುವುದು.<br>- ರಾಜ್ಯದ 10 ವಿವಿಧ ಕಾರಾಗೃಹಗಳ ಆವರಣದಲ್ಲಿ 1,475 ಬಂದಿಗಳಿಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲು ಹೆಚ್ಚುವರಿ ಬ್ಯಾರಕ್ ನಿರ್ಮಾಣ ಕಾಮಗಾರಿ ಮುಕ್ತಾಯಗೊಂಡಿರುತ್ತದೆ.<br>- ರಾಜ್ಯದ ಶಿಥಿಲಾವಸ್ಥೆ ತಲುಪಿರುವ ಕಾರಾಗೃಹ ಕಟ್ಟಡಗಳ ಬದಲಾಗಿ ನೂತನ ಕಾರಾಗೃಹ ಕಟ್ಟಡಗಳನ್ನು ನಿರ್ಮಿಸಲು ಹಾಸನ, ರಾಯಚೂರು, ಯಾದಗಿರಿ, ದಾವಣಗೆರೆ, ಕೋಲಾರ, ಗದಗ, ವಿಜಯನಗರ, ಗಂಗಾವತಿ, ತಿಪಟೂರು, ಮಧುಗಿರಿ ಮತ್ತು ತರೀಕೆರೆಯಲ್ಲಿ 2025-26ನೇ ಅಯವ್ಯಯದಲ್ಲಿ ಒಟ್ಟು 3200 ಬಂದಿಗಳ ಸಾಮರ್ಥ್ಯದ ನೂತನ ಕಾರಾಗೃಹಗಳ ನಿರ್ಮಾಣಕ್ಕೆ ಸರ್ಕಾರಕ್ಕೆ ಅನುದಾನ ನೀಡುವಂತೆ ಕೋರಲಾಗಿರುತ್ತದೆ.<br>- ಕೇಂದ್ರ ಕಾರಾಗೃಹ ಬೆಂಗಳೂರಿನಲ್ಲಿರುವ 280 ಸಂಖ್ಯೆ ಸಿಸಿಟಿವಿಗಳಿಗೆ AI-Powered Audio Video Analytics System ಗಳನ್ನು ಫೆಬ್ರುವರಿ 2025 ರಲ್ಲಿ ಆಳವಡಿಸಲಾಗಿದೆ.<br>- ರಾಜ್ಯದ 08 ಕಾರಾಗೃಹಗಳಲ್ಲಿರುವ 66 ಸಂಖ್ಯೆ ಹಳೆಯ ಮೊಬೈಲ್ ಜಾಮಾರ್‌ಗಳನ್ನು ರಿಪೇರಿ, ಮೇಲ್ದರ್ಜೆಮತ್ತು 03 ವರ್ಷಗಳ ವಾರ್ಷಿಕ |

| | | |
|---|---|---|
| | | ನಿರ್ವಹಣೆ ಕೈಗೊಳ್ಳಲು ಆದೇಶಿಲಾಗಿದೆ. ಕೇಂದ್ರ ಕಾರಾಗೃಹ ಬೆಂಗಳೂರು ಮತ್ತು ಬೆಳಗಾವಿಯಲ್ಲಿರುವ ಮೊಬೈಲ್ ಜಾಮಾರ್‌ಗಳ ರಿಪೇರಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಮುಕ್ತಾಯಗೊಂಡಿದ್ದು, Testing and Recalibration ಪರಿಶೀಲನಾ ಹಂತದಲ್ಲಿರುತ್ತದೆ.<br><br>- ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಭದ್ರತೆ ಹಿತದೃಷ್ಟಿಯಿಂದ ಒಟ್ಟು 1734 ಸಿಸಿಟಿವಿ ಕ್ಯಾಮರಾಗಳನ್ನುಅಳವಡಿಸಲಾಗಿದೆ.<br><br>- ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಅತ್ಯಾಧುನಿಕ 3 ಸಂಖ್ಯೆ T-HCBS (Tower of Hormonious call blocking system) ಗಳನ್ನುಅಳವಡಿಸಲಾಗಿರುತ್ತದೆ.<br>- ಅತ್ಯಾಧುನಿಕ ಮಾದರಿಯ 19 ಸಂಖ್ಯೆಯ ಬ್ಯಾಗೇಜ್ ಸ್ಕ್ಯಾನರ್ ಖರೀದಿಸಲು ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಸರಬರಾಜು ಅಂತಿಮಹಂತದಲ್ಲಿದೆ.<br><br>- ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಬಂದಿಗಳ ಆತ್ಮಹತ್ಯೆ/ಘರ್ಷಣೆ / ಅಸಹಜಸಾವು ಪ್ರಕರಣಗಳನ್ನು ತಡೆಗಟ್ಟಲು ಕಾಲ-ಕಾಲಕ್ಕೆ ಅಗತ್ಯ ನಿರ್ದೇಶನಗಳನ್ನು ಕಾರಾಗೃಹಗಳ ಮುಖ್ಯಅಧೀಕ್ಷಕರು / ಅಧೀಕ್ಷಕರುಗಳಿಗೆ ನೀಡಲಾಗಿರುತ್ತದೆ. ಅದರನ್ವಯ, ಅಗತ್ಯ ಕ್ರಮಗಳನ್ನುಕೈಗೊಳ್ಳಲಾಗುತ್ತಿರುತ್ತದೆ.<br><br>- ರಾಜ್ಯದ ಕಾರಾಗೃಹಗಳಲ್ಲಿರುವ ಬಂದಿಗಳಿಗೆ ಕೌಶಲ್ಯಾಭಿವೃದ್ಧಿ ಇಲಾಖೆ ಮತ್ತು ಸರ್ಕಾರೇತರ ಸಂಸ್ಥೆವತಿಯಿಂದ ವಿವಿಧ ರೀತಿಯ ವೃತ್ತಿಪರ ತರಬೇತಿಗಳನ್ನು ನೀಡಲಾಗುತ್ತಿದೆ.<br><br>- ಕಾರಾಗೃಹದ ಅನಕ್ಷರಸ್ಥ ಮತ್ತುಅರೆ-ಅಕ್ಷರಸ್ಥ ಬಂದಿಗಳಿಗೆ ಕಲಿಕೆಯಿಂದ ಬದಲಾವಣೆ ಎಂಬ ಕಾರ್ಯಕ್ರಮದಡಿ 2024ರಲ್ಲಿ 1423 ಬಂದಿಗಳಿಗೆ ಅಕ್ಷರಸ್ಥರಾಗಿ ಪರಿವರ್ತಿಸಲಾಗಿದೆ.<br><br>- ಕಾರಾಗೃಹಗಳಲ್ಲಿ ತಂಬಾಕು ಮತ್ತು ಮಾದಕ ವ್ಯಸನ ಮುಕ್ತಕೇಂದ್ರ (Tobacco and Drug De-addiction Center) ಗಳನ್ನು ಸ್ಥಾಪನೆ ಮಾಡಲಾಗಿದೆ. ಕಾರಾಗೃಹಕ್ಕೆ ದಾಖಲಾಗುವ ವ್ಯಸನ ಬಂದಿಗಳನ್ನು ಗುರ್ತಿಸಿ ಅಂತವರಿಗೆ ಆಪ್ತಸಮಾಲೋಚನೆ ಮತ್ತು ಚಿಕಿತ್ಸೆ ಮೂಲಕ ವ್ಯಸನಮುಕ್ತರನ್ನಾಗಿ ಮಾಡಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | - ಕಾರಾಗೃಹದ ಬಂದಿಗಳಿಗೆ ಇಶಾಫೌಂಡೇಶನ್, ಆರ್ಟ್ ಆಫ್ ಲಿವಿಂಗ್ ಮತ್ತು ಇನ್ನಿತರೆ ಸಂಸ್ಥೆಗಳ ಮೂಲಕ ಯೋಗ, ಧ್ಯಾನ ತರಬೇತಿಯನ್ನು ಸುಮಾರು 27267 ಬಂದಿಗಳಿಗೆ ತರಬೇತಿ ನೀಡಿ ಮನಃಪರಿವರ್ತನೆ ಮಾಡಲು ಕ್ರಮ ವಹಿಸಲಾಗುತ್ತಿದೆ.<br><br>- 2024-25 ಸಾಲಿನಲ್ಲಿ ರಾಜ್ಯದ ವಿವಿಧ ಕಾರಾಗೃಹಗಳಿಂದ ಗೌ\|\| ನ್ಯಾಯಾಲಯಗಳಿಗೆ 178650 ಬಂದಿಗಳನ್ನು (ಶೇ.95% ರಷ್ಟು) ವೀಡಿಯೊ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿ ತುರ್ತಾಗಿ ಪ್ರಕರಣ ವಿಲೇವಾರಿ ಮಾಡಲು ಮಾಡಲು ಕ್ರಮವಹಿಸಲಾಗುತ್ತಿದೆ.<br><br>- ಕಾರಾಗೃಹಕ್ಕೆ ದಾಖಲಾಗುವ ಬಂದಿಗಳಿಗೆ ಇ-ಮುಲಾಖಾತ್ ವ್ಯವಸ್ಥೆ ಕಲ್ಪಿಸಲಾಗಿದ್ದು, 2024ನೇ ಸಾಲಿನಲ್ಲಿ 4012 ಬಂದಿಗಳು ಈ ವ್ಯವಸ್ಥೆಯನ್ನು ಉಪಯೋಗಿಸಿಕೊಂಡಿರುತ್ತಾರೆ.<br><br>- ಸರ್ಕಾರದ ಆದೇಶ ಸಂಖ್ಯೆಹೆಚ್‌ಡಿ 49 ಪಿಆರ್‌ಎ 2021, ದಿನಾಂಕ: 28.09.2022 ರಲ್ಲಿ ಕಾರಾಗೃಹದಲ್ಲಿ ಕೆಲಸ ನಿರ್ವಹಿಸುವ ಬಂದಿಗಳಿಗೆ ನೀಡಲಾಗುವ ಕೂಲಿ ಹಣ ಹೆಚ್ಚಿಸಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.<br>ತರಬೇತಿ ಕೆಲಸಗಾರ ಬಂದಿ – ರೂ.524.00<br>ಅರೆಕುಶಲ ಬಂದಿ – ರೂ.548.00<br>ಕುಶಲ ಬಂದಿ – ರೂ.615.00<br>ಹೆಚ್ಚಿನ ಕುಶಲ ಬಂದಿ – ರೂ.663.00<br><br>- ಬಂದಿಗಳಿಗೆ ಜಿಲ್ಲಾ ಮತ್ತು ಕಾನೂನು ಸೇವಾ ಪ್ರಾಧಿಕಾರ ವತಿಯಿಂದ ಉಚಿತ ಕಾನೂನು ನೆರವು ನೀಡಲಾಗುತ್ತಿದೆ. ಹಾಗೂ ಕಾನೂನು ಅರಿವು ಕಾರ್ಯಕ್ರಮ, ಆಯೋಜಿಸಿ ಬಂದಿಗಳಿಗೆ ಅರಿವು ಮೂಡಿಸಲಾಗುತ್ತಿದೆ.<br><br>- ಕಾರಾಗೃಹಗಳಲ್ಲಿ ಬಂದಿಗಳಿಗೆ ವಿವಿಧ ಸಂಸ್ಥೆಗಳ ಮೂಲಕ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ತರಬೇತಿಗಳನ್ನು ನೀಡಿ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ.<br><br>- ಬಂದಿಗಳ ಮನಃ ಪರಿವರ್ತನೆಗಾಗಿ ರಾಜ್ಯದ ಕೇಂದ್ರ ಕಾರಾಗೃಹಗಳಲ್ಲಿ ಎಫ್. ಎಂ. ರೇಡಿಯೋ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. |

| | | |
|---|---|---|
| | | - ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಆರ್ಥಿಕ ದುರ್ಬಲ ಬಂದಿಗಳಿಗೆ ಆರ್ಥಿಕ ನೆರವು ಒದಗಿಸುವ ಸಂಬಂಧ ಜಿಲ್ಲಾ ಮಟ್ಟದಲ್ಲಿ 'Empowered Committee' ಮತ್ತು ರಾಜ್ಯ ಮಟ್ಟದಲ್ಲಿ 'State Level Oversight Committee' ಯನ್ನು ರಾಜ್ಯ ಸರ್ಕಾರವು ಕೇಂದ್ರ ಗೃಹ ಮಂತ್ರಾಲಯದ ಮಾರ್ಗಸೂಚಿಯನ್ವಯ ರಚಿಸಲಾಗಿರುತ್ತದೆ. ವಿಚಾರಣಾ ಬಂದಿಗಳಿಗೆ ನಗದು ಜಾಮೀನು ಖಾತ್ರಿಯನ್ನು ಮತ್ತು ಶಿಕ್ಷಾ ಬಂದಿಗಳಿಗೆ ದಂಡದ ಹಣವನ್ನು ಭರಿಸಲು ಆರ್ಥಿಕ ನೆರವು ನೀಡುತ್ತದೆ.<br><br>- BNSS 479 ರಡಿಯಲ್ಲಿ ಬಂದಿಗಳ ಬಿಡುಗಡೆಗೆ ಸ್ವಯಂ ಜಾಮೀನಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.<br><br>- ರಾಜ್ಯದ ಕಾರಾಗೃಹಗಳ ಬಂದಿಗಳಿಗೆ ಒಟ್ಟು 83 ಪ್ರಿಸನ್ಸ್ ಕಾಲ್ ಸಿಸ್ಟಂ ಒದಗಿಸಲಾಗಿದ್ದು, ಸದರಿ ವ್ಯವಸ್ಥೆಯ ಮೂಲಕ ಅವರ ಕುಟುಂಬದವರೊಂದಿಗೆ ಹಾಗೂ ಅವರ ವಕೀಲರೊಂದಿಗೆ ದೂರವಾಣಿ ಮೂಲಕ ಮಾತನಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>- ಕಾರಾಗೃಹಗಳಲ್ಲಿ ಮನಃಪರಿವರ್ತನೆ ಹೊಂದಿದ ಶಿಕ್ಷಾ ಬಂದಿಗಳನ್ನು ಗೌ|| ರಾಜ್ಯಪಾಲರ ಆದೇಶಾನುಸಾರ ಬಿಡುಗಡೆ ಮಾಡಲಾಗುತ್ತಿದೆ. 2024ನೇ ಸಾಲಿನಲ್ಲಿ 126 ಜನ ಜೀವಾವಧಿ ಶಿಕ್ಷಾಬಂದಿಗಳನ್ನು ಹಾಗೂ ಒಬ್ಬರು ಅಲ್ಪಾವಧಿ ಶಿಕ್ಷಾ ಬಂದಿ ಸೇರಿ ಒಟ್ಟು 127 ಬಂದಿಗಳನ್ನು ಸನ್ನಡತೆ (Good behavior) ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆ ಮಾಡಲಾಗಿರುತ್ತದೆ.<br><br>- ಬಯಲು ಕಾರಾಗೃಹದಲ್ಲಿ ಆಧುನಿಕ ಮಾದರಿಯ ಕೃಷಿ, ತೋಟಗಾರಿಕೆ, ಕುರಿ ಸಾಕಾಣಿಕೆ ಮತ್ತು ಹೈನುಗಾರಿಕೆ ತರಬೇತಿ ನೀಡಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 75 ಪಿಆರ್‌ಎ 2025

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು

# ಅನುಬಂಧ-1

| ಕ್ರಮ ಸಂಖ್ಯೆ | ಘಟಕ | ಕಳೆದ 10 ವರ್ಷಗಳಲ್ಲಿ ಪೊಲೀಸ್ ವಶದಲ್ಲಿದ್ದಾಗ/ ಜೈಲಿನಲ್ಲಿದ್ದಾಗ ಮೃತಪಟ್ಟ ಕೈದಿಗಳು/ ವಿಚಾರಣಾಧೀನ ಕೈದಿಗಳ(ಆರೋಪಿಗಳ) ಸಂಖ್ಯೆ |
|---|---|---|
| 1. | ಬೆಂಗಳೂರು ನಗರ | 11 |
| 2. | ಮೈಸೂರು ನಗರ | 50 |
| 3. | ಹುಬ್ಬಳ್ಳಿ-ಧಾರವಾಡ ನಗರ | 59 |
| 4. | ಮಂಗಳೂರು ನಗರ | 24 |
| 5. | ಬೆಳಗಾವಿ ನಗರ | 53 |
| 6. | ಕಲಬುರಗಿ ನಗರ | 45 |
| 7. | ಬೆಂಗಳೂರು ಜಿಲ್ಲೆ | 0 |
| 8. | ತುಮಕೂರು ಜಿಲ್ಲೆ | 11 |
| 9. | ಕೋಲಾರ ಜಿಲ್ಲೆ | 02 |
| 10. | ರಾಮನಗರ ಜಿಲ್ಲೆ | 01 |
| 11. | ಚಿಕ್ಕಬಳ್ಳಾಪುರ ಜಿಲ್ಲೆ | 06 |
| 12. | ಕೆ.ಜಿ.ಎಫ್. | 02 |
| 13. | ಮೈಸೂರು ಜಿಲ್ಲೆ | 02 |
| 14. | ಮಂಡ್ಯ ಜಿಲ್ಲೆ | 06 |
| 15. | ಹಾಸನ ಜಿಲ್ಲೆ | 08 |
| 16. | ಕೊಡಗು ಜಿಲ್ಲೆ | 0 |
| 17. | ಚಾಮರಾಜನಗರ ಜಿಲ್ಲೆ | 03 |
| 18. | ಚಿತ್ರದುರ್ಗ ಜಿಲ್ಲೆ | 07 |
| 19. | ಹಾವೇರಿ ಜಿಲ್ಲೆ | 05 |
| 20. | ಶಿವಮೊಗ್ಗ ಜಿಲ್ಲೆ | 17 |
| 21. | ದಾವಣಗೆರೆ ಜಿಲ್ಲೆ | 05 |
| 22. | ದಕ್ಷಿಣ ಕನ್ನಡ ಜಿಲ್ಲೆ | 0 |
| 23. | ಉತ್ತರ ಕನ್ನಡ ಜಿಲ್ಲೆ | 01 |
| 24. | ಚಿಕ್ಕಮಗಳೂರು ಜಿಲ್ಲೆ | 08 |
| 25. | ಉಡುಪಿ ಜಿಲ್ಲೆ | 03 |
| 26. | ಬೆಳಗಾವಿ ಜಿಲ್ಲೆ | 02 |
| 27. | ವಿಜಯಾಪುರ ಜಿಲ್ಲೆ | 15 |
| 28. | ಧಾರವಾಡ ಜಿಲ್ಲೆ | 0 |
| 29. | ಬಾಗಲಕೋಟೆ ಜಿಲ್ಲೆ | 02 |
| 30. | ಗದಗ ಜಿಲ್ಲೆ | 4 |
| 31. | ಕಲಬುರಗಿ ಜಿಲ್ಲೆ | 01 |
| 32. | ಬೀದರ್ ಜಿಲ್ಲೆ | 04 |
| 33. | ಯಾದಗಿರಿ ಜಿಲ್ಲೆ | 01 |
| 34. | ಬಳ್ಳಾರಿ ಜಿಲ್ಲೆ | 05 |
| 35. | ರಾಯಚೂರು ಜಿಲ್ಲೆ | 04 |
| 36. | ಕೊಪ್ಪಳ ಜಿಲ್ಲೆ | 0 |
| 37. | ವಿಜಯನಗರ ಜಿಲ್ಲೆ | 0 |
| | ಒಟ್ಟು | 367 |

# ಅನುಬಂಧ-3

**ಕಸ್ಟಡಿಯಲ್ಲಿದ್ದಾಗ (Custodial death) ಮೃತಪಟ್ಟ ಆರೋಪಿ ಅಥವ ಕೈದಿಗಳ ಪ್ರಕರಣಗಳಲ್ಲಿ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕ್ರಮ ಜರುಗಿಸಲಾಗಿರುವ ವಿವರ**

| ಕ್ರ.ಸ | ಮೊ ಸಂ: ಹಾಗೂ ವಿವರ | ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ವಿವರ | ಶಿಸ್ತು ಕ್ರಮ ಜರುಗಿಸಿರುವ ಬಗ್ಗೆ ಮಾಹಿತಿ ಮತ್ತು ಪ್ರಸ್ತುತ ಹಂತ |
|---|---|---|---|
| 1. | **ಪೊಲೀಸ್ ಆಯುಕ್ತರು ಹುಬ್ಬಳ್ಳಿ-ಧಾರವಾಡ** ಉತ್ತರ ಕನ್ನಡ ಜಿಲ್ಲೆ, ಕಾರವಾರ, ಯಲ್ಲಾಪೂರ ಪೊಲೀಸ್ ಠಾಣೆ, ಮೊ.ಸಂ:256/2022, ಕಲಂ:454, 457, 380 ಐಪಿಸಿ ನೇದ್ದರ ಪ್ರಕರಣದಲ್ಲಿ ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸುತ್ತಿದ್ದ ಮಾರ್ಗ ವಿಚಾರಣಾ ಬಂದಿ ಸಂ:3110 ವಸಂತಕುಮಾರ @ ವಸಂತ ತಂದೆ ಶಿವಪ್ಪ ತಂಬಾಕದ ಈತನಿಗೆ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಹಾಗೂ ವೈದ್ಯಾಧಿಕಾರಿಗಳು ತಾಲೂಕು ಆಸ್ಪತ್ರೆ, ಹಳಿಯಾಳ ರವರ ಸಲಹೆಯಂತೆ ಉಪ ಕಾರಾಗೃಹ ಹಳಿಯಾಳದಿಂದ ಡಿಮಾನ್ಸ್ ಆಸ್ಪತ್ರೆ, ಧಾರವಾಡ ಇಲ್ಲಿಗೆ ಹೆಚ್ಚಿನ ಚಿಕಿತ್ಸೆ ಕೊಡಿಲು ದಿ:06/03/2023 ರಂದು ಕೇಂದ್ರ ಕಾರಾಗೃಹ, ಧಾರವಾಡಗೆ ವರ್ಗಾವಣೆ ಮಾಡಲಾಗಿರುತ್ತದೆ. ಅದೇ ದಿನ ಬಂದಿಯನ್ನು ಡಿಮಾನ್ಸ್ ಆಸ್ಪತ್ರೆ, ಧಾರವಾಡದ ಪ್ರಿಸನ್ ವಾರ್ಡನಲ್ಲಿ ಒಳರೋಗಿಯಾಗಿ ದಾಖಲು ಮಾಡಿಕೊಂಡು ಚಿಕಿತ್ಸೆ ನೀಡಲಾಗುತ್ತಿತ್ತು. ಬಂದಿಯು ದಿನಾಂಕ: 17/03/2023 ರಂದು ಬೆಳಿಗ್ಗೆ 06.20 ಗಂಟೆಯಿಂದ 06.50 ರ ಸಮಯದಲ್ಲಿ ಶೌಚಾಲಯಕ್ಕೆ ಹೋದ ಸಂದರ್ಭದಲ್ಲಿ ಬೆಡ್ ಶೀಟನ್ನು ತುಂಡು ಮಾಡಿ ಅದನ್ನೆ ಹಗ್ಗದ ರೀತಿ ಮಾಡಿಕೊಂಡು ಕಿಟಕಿಯ ಸರಳಿಗೆ ಕಟ್ಟಿ ನೇಣಿಗೆ ಶರಣಾಗಿರುತ್ತಾನೆ. | 1) ಶ್ರೀ ಜೆ.ಟಿ.ಗೊಲ್ಲರ, ಎ.ಹೆಚ್.ಸಿ-133 ಸಿ.ಎ.ಆರ್, ಹುಬ್ಬಳ್ಳಿ-ಧಾರವಾಡ ನಗರ. (ಗಾರ್ಡ ಕಮಾಂಡರ್ ಕರ್ತವ್ಯ)<br><br>2) ಶ್ರೀ ಆರ್.ಬಿ.ಹಡಪದ, ಎಪಿಸಿ-728, ಸಿ.ಎ.ಆರ್, ಹುಬ್ಬಳ್ಳಿ-ಧಾರವಾಡ ನಗರ. (ವಿಚಾರಣಾ ಬಂದಿಯ ಪಹರೆ ಕರ್ತವ್ಯ)<br><br>3) ಶ್ರೀ ಶಿವಾನಂದ ಕೋಮಾರಿ, ಎಪಿಸಿ-840, ಸಿ.ಎ.ಆರ್, ಹುಬ್ಬಳ್ಳಿ-ಧಾರವಾಡ ನಗರ. (ವಿಚಾರಣಾ ಬಂದಿಯ ಪಹರೆ ಕರ್ತವ್ಯ) | ಸದರಿಯವರುಗಳ ವಿರುದ್ಧ ಕೆ.ಎಸ್.ಪಿ (ಡಿಪಿ) ನಿಯಮಾವಳಿ 1965 (ತಿದ್ದುಪಡಿ 1989)ರ ನಿಯಮ 7 ರಡಿ ಶಿಸ್ತುಕ್ರಮ ಕೈಗೊಂಡು, ಅಂತಿಮ ಆದೇಶದಲ್ಲಿ ಸದರಿಯವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವೇತನ ಬಡ್ತಿಗಳ ಮೇಲೆ ಸಂಚಿತ ಪರಿಣಾಮ ರಹಿತವಾಗಿ 01 (ಒಂದು) ವರ್ಷ ಕಾಲ ಮುಂದೂಡಿ ಆದೇಶಿಸಲಾಗಿರುತ್ತದೆ. |
| 2. | **ಎಸ್ ಪಿ ದಾವಣಗೆರೆ ಜಿಲ್ಲೆ** ದಾವಣಗೆರೆ ಜಿಲ್ಲೆಯ ಚನ್ನಗಿರಿ ಪೊಲೀಸ್ ಠಾಣೆ ಮೊ.ಸಂ: ಯು.ಡಿ.ಆರ್ ನಂ: 44/2015, ಕಲಂ: 174 ಸಿ.ಆರ್.ಪಿ.ಸಿ | ಶ್ರೀ ಜ್ಞಾನದೇವ.ಎಂ.ಸಿ., ಸಿ.ಹೆಚ್.ಸಿ-283,<br><br>(ಹಾಲಿ ಎಎಸ್‌ಐ)<br><br>ಚನ್ನಗಿರಿ ಪೊಲೀಸ್ ಠಾಣೆ, | ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ 6 ತಿಂಗಳ ಕಾಲ ಮುಂದೂಡಲಾಗಿರುತ್ತದೆ ಹಾಗೂ ಅಮಾನತ್ತಿನಲ್ಲಿರಿಸಿದ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿರುತ್ತದೆ. |

| | | | |
|---|---|---|---|
| | | ದಾವಣಗೆರೆ ಜಿಲ್ಲೆ | |
| ೩. | ದಾವಣಗೆರೆ ಜಿಲ್ಲೆಯ ಮಾಯಕೊಂಡ ಪೊಲೀಸ್ ಠಾಣೆ ಮೊ.ಸಂ: 113/2020, ಕಲಂ: 341, 342, 302, 201 ಐಪಿಸಿ ಮತ್ತು ಕಲಂ: 3(2)(5), 3(2)(ವಿ–ಎ) ಎಸ್‌ಸಿ/ಎಸ್‌ಟಿ ಪಿ.ಎ ಆಕ್ಟ್ 1989 | (1) ಶ್ರೀ ಪ್ರಕಾಶ್.ಬಿ., ಪಿಎಸ್‌ಐ, (ಹಾಲಿ ನಿವೃತ್ತ)<br>(2) ಶ್ರೀ ನಾಗರಾಜ್.ಎಸ್.ಟಿ., ಸಿಹೆಚ್‌ಸಿ–50<br>(ಹಾಲಿ ಕಡ್ಡಾಯ ನಿವೃತ್ತಿ)<br>&<br>(3) ಶ್ರೀ ಶೇರ್‌ಅಲಿ, ಸಿಪಿಸಿ–236<br>(ಹಾಲಿ ಕಡ್ಡಾಯ ನಿವೃತ್ತಿ)<br>ಎಲ್ಲರೂ ಮಾಯಕೊಂಡ ಪೊಲೀಸ್ ಠಾಣೆ,<br>ದಾವಣಗೆರೆ ಜಿಲ್ಲೆ. | ಎಲ್ಲಾ 03 ಜನ ಅಧಿಕಾರಿ/ ಸಿಬ್ಬಂದಿಗಳನ್ನು ಸೇವೆಯಿಂದ ಅಮಾನತ್ತಿನಲ್ಲಿರಿಸಿ, ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದ್ದು,<br>ನಂತರ ಸರ್ಕಾರದ ಆದೇಶ ಸಂ: ಒಇ 28 ಪೊಸಇ 2022, ದಿನಾಂಕ:<br>29-08-2022 ರಲ್ಲಿ ಜಂಟಿ ಇಲಾಖಾ ವಿಚಾರಣೆಯಲ್ಲಿ ಸದರಿಯವರುಗಳ ಮೇಲಿನ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿದ್ದರಿಂದ ಪಿಎಸ್‌ಐ ರವರ ಪಿಂಚಣಿಯಲ್ಲಿ ಶೇಕಡ 25 ರಷ್ಟು ಮೊತ್ತವನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಲಾಗಿರುತ್ತದೆ ಹಾಗೂ ಸಿಹೆಚ್‌ಸಿ ಮತ್ತು ಸಿಪಿಸಿ ರವರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲಾಗಿರುತ್ತದೆ ಹಾಗೂ ಸದರಿಯವರುಗಳ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಲಾಗಿರುತ್ತದೆ. |
| 4. | ದಾವಣಗೆರೆ ಜಿಲ್ಲೆಯ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯ ಮೊ.ಸಂ: 164/2023, ಕಲಂ: 302, 109 ರೆ/ವಿ 34 ಐಪಿಸಿ | (1) ಶ್ರೀ ಕೃಷ್ಣಪ್ಪ, ಪಿಎಸ್‌ಐ, ದಾವಣಗೆರೆ ಗ್ರಾ.ಠಾಣೆ(ಹಾಲಿ ಹಾವೇರಿ ಜಿಲ್ಲೆ)<br>&(2) ಶ್ರೀ ದೇವರಾಜ್ ಸಿಪಿಸಿ–37, ದಾವಣಗೆರೆ ಗ್ರಾ. ಠಾಣೆ (ಹಾಲಿ ಆಜಾದ್ ನಗರ ಠಾಣೆ, ದಾವಣಗೆರೆ) | ಪಿಎಸ್‌ಐ ಮತ್ತು ಸಿಪಿಸಿ ರವರನ್ನು ಅಮಾನತ್ತುಗೊಳಿಸಿ, ನಂತರ ಐಜಿಪಿ, ಪೂರ್ವ ವಲಯ, ದಾವಣಗೆರೆ ರವರು ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿದ್ದು, ಹಾಲಿ ಈ ಜಂಟಿ ಇಲಾಖಾ ವಿಚಾರಣೆಯು ಪ್ರಗತಿಯಲ್ಲಿರುತ್ತದೆ. |
| 5. | ದಾವಣಗೆರೆ ಜಿಲ್ಲೆಯ ಕೆ.ಟಿ.ಜೆ ನಗರ ಪೊಲೀಸ್ ಠಾಣೆಯ ಮೊ.ಸಂ: 225/2021, ಕಲಂ: 302 ರೆ/ವಿ 34 ಐಪಿಸಿ. | (1) ಶ್ರೀ ಬಿ.ವಿ.ಗಿರೀಶ್, ಪಿಐ, ಸಿ.ಇ.ಎನ್ ಠಾಣೆ, ದಾವಣಗೆರೆ. (ಹಾಲಿ ಚಿಕ್ಕಮಗಳೂರು ಜಿಲ್ಲೆ)<br>& (2) ಶ್ರೀ ಎಂ.ವಿ.ಮೇಘರಾಜ್, ಪಿಎಸ್‌ಐ, ಸಿ.ಇ.ಎನ್ ಠಾಣೆ, ದಾವಣಗೆರೆ. (ಹಾಲಿ ಪಿಐ, ಡಿ.ಸಿ.ಆರ್.ಇ., ದಾವಣಗೆರೆ.) | ಐಜಿಪಿ, ಪೂರ್ವ ವಲಯ, ದಾವಣಗೆರೆ ರವರು ಸದರಿ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತಿನಲ್ಲಿರುತ್ತಾರೆ. ನಂತರ ಕೆ.ಎಸ್.ಪಿ (ಡಿ.ಪಿ) ನಿಯಮ–7 ರಡಿಯಲ್ಲಿ ದೋಷಾರೋಪಣೆಯನ್ನು ಹೊರಡಿಸಲಾಗಿದ್ದು, ಆರೋಪ ಸಾಭೀತಾಗದೇ ಇದ್ದುದರಿಂದ ದೋಷಮುಕ್ತ ಮಾಡಲಾಗಿರುತ್ತದೆ ಹಾಗೂ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಮೇಲಿನ ಅವಧಿಯೆಂದು ಪರಿಗಣಿಸಲಾಗಿರುತ್ತದೆ. |

| | | | |
|---|---|---|---|
| 6. | ದಾವಣಗೆರೆ ಜಿಲ್ಲೆಯ ಚನ್ನಗಿರಿ ಪೊಲೀಸ್ ಠಾಣೆಯ ಮೊ.ಸಂ: ಯು.ಡಿ.ಆರ್ ನಂ: 17/2024, ಕಲಂ: 174, 175(1)(ಎ) ಸಿ.ಆರ್.ಪಿ.ಸಿ | (1) ಶ್ರೀ ಪ್ರಶಾಂತ್ ಮೂನೋಳಿ, ಡಿವೈಎಸ್‌ಪಿ, ಚನ್ನಗಿರಿ ಉಪ ವಿಭಾಗ, ದಾವಣಗೆರೆ ಜಿಲ್ಲೆ (ಅಥಣಿ ಉಪ ವಿಭಾಗ, ಬೆಳಗಾವಿ ಜಿಲ್ಲೆ)<br><br>(2) ಶ್ರೀ ನಿರಂಜನ್.ಬಿ. ಪಿ.ಐ., ಚನ್ನಗಿರಿ ಪೊಲೀಸ್ ಠಾಣೆ (ಹಾಲಿ ಐಎಸ್‌ಡಿ, ಬೆಂಗಳೂರು)<br><br>(3) ಶ್ರೀ ಹಾರೂನ್ ಅಖ್ತರ್, ಪಿಎಸ್‌ಐ, ಚನ್ನಗಿರಿ ಠಾಣೆ(ಹಾಲಿ ದಾವಣಗೆರ ಗ್ರಾ.ಠಾಣೆ)&(4) ಶ್ರೀ ಸಂತೋಷ್.ಡಿ.ಹೆಚ್., ಸಿಪಿಸಿ-281, ಚನ್ನಗಿರಿ ಠಾಣೆ (ಹಾಲಿ ಸಂತೇಬೆನ್ನೂರು ಠಾಣೆ, ದಾವಣಗೆರೆ ಜಿಲ್ಲೆ) | ಡಿವೈಎಸ್‌ಪಿ & ಪಿಐ ರವರನ್ನು ಸರ್ಕಾರದಿಂದ ಅಮಾನತ್ತಿನಲ್ಲಿ ಇರಿಸಲಾಗಿದ್ದು, ನಂತರ ಲೀನ್ ಬದಲಾವಣೆ ಮಾಡಲಾಗಿರುತ್ತದೆ.<br><br>ಪಿಎಸ್‌ಐ ರವರನ್ನು ಐಜಿಪಿ, ಪೂರ್ವ ವಲಯ, ದಾವಣಗೆರೆ ರವರು ಸೇವೆಯಿಂದ ಅಮಾನತ್ತಿನಲ್ಲಿರಿಸಿ ನಂತರ ಲೀನ್ ಬದಲಾವಣೆ ಮಾಡಲಾಗಿರುತ್ತದೆ.<br><br>ಪ್ರಸ್ತುತ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕೆ.ಎಸ್.ಪಿ (ಡಿಪಿ) ನಿಯಮ-7 ರಡಿಯಲ್ಲಿ ದೋಷಾರೋಪಣೆಯನ್ನು ಹೊರಡಿಸಲಾಗಿರುತ್ತದೆ. |
| 7. | ಕಮಲನಗರ ಪೊಲೀಸ್ ಠಾಣೆ ಯು.ಡಿ.ಆರ್ ನಂ 10/2020 ಕಲಂ 176 ಸಿಆರ್‌ಪಿಸಿ<br><br>ಈ ಪ್ರಕರಣದಲ್ಲಿ ಆಪಾದಿತನು ಇಬ್ಬರು ವಿಶೇಷ ಪಹರೆ ಕರ್ತವ್ಯದ ಸಿಬ್ಬಂದಿಯವರಿಂದ ತಪ್ಪಿಸಿಕೊಂಡು ಠಾಣೆಯಿಂದ ಓಡಿ ಹೋಗಿ ಬಾವಿಯಲ್ಲಿ ಬಿದ್ದು ಮೃತಪಟ್ಟಿದ್ದು ಇರುತ್ತದೆ. | 1) ಬಲಭೀಮ ಸಿಎಚ್‌ಸಿ-517 ಮತ್ತು 2) ವಿಜಯಕುಮಾರ ಸಿಪಿಸಿ 1495 ಕಮಲನಗರ ಪೊಲೀಸ್ ಠಾಣೆ | ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ (06) ಆರು ತಿಂಗಳ ಕಾಲ ಮುಂದೂಡಲಾಗಿದೆ ಹಾಗೂ ಅವರು ಅಮಾನತ್ತಿಲ್ಲಿದ್ದ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ. |
| 8. | **ಉಡುಪಿ** ಮಣಿಪಾಲ ಠಾಣಾ ಯುಡಿಆಋ ನಂ: 33/2015 ಕಲಂ 174 ಸಿಆರ್‌ಪಿಸಿ<br><br>(ಮೃತ: ಗಯಾಪ್ರಸಾದ್ | 1)ಎಸ್.ವಿಗಿರೀಶ್, ಪಿಐ,<br>2)ಮಹೇಶ್ ಹೆಚ್‌ಸಿ-2090,<br>3)ಕೃಷ್ಣಪ್ರಸಾದ್, ಪಿಸಿ 1624, ಮಣಿಪಾಲಠಾಣೆ | ವಲಯ ಕಛೇರಿಯಿಂದ ಇಲಾಖಾ ವಿಚಾರಣೆ ನಡೆಸಿ ದೋಷಮುಕ್ತಗೊಳಿಸಲಾಗಿದೆ. |
| 9. | ಹಿರಿಯಡ್ಕ ಠಾಣಾ ಅ.ಕ್ರನಂ: 41/2018 ಕಲಂ 143, 341, 147, 148, 427, 302, ರೆ/ವಿ 149 ಐಪಿಸಿ<br><br>(ಮೃತ: ಹುಸೈನಬ್ಬ) | 1)ಶ್ರೀಡಿ.ಎನ್ಕುಮಾರ್, ಪಿಎಸ್‌ಐ,<br>2)ಶ್ರೀಮೋಹನ್ಕೋತ್ವಾಲ್,<br><br>ಸಿಹೆಚ್‌ಸಿ-01,<br>3)ಶ್ರೀಗೋಪಾಲನಾಯ್ಕ್, ಎಪಿಸಿ- | ವಲಯ ಕಛೇರಿಯಿಂದ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ದಿ: 08-05-2023ರ ಆದೇಶದಲ್ಲಿ ಸದರಿಯವರುಗಳ ವಾರ್ಷಿಕ ವೇತನ ಬಡ್ತಿಯನ್ನು ತದನಂತರ ಗಳಿಸುವ ವಾರ್ಷಿಕ ವೇತನಬಡ್ತಿಗೆ ಭಾದಕವಾಗುವಂತೆ 02 ವರ್ಷಗಳಕಾಲ ಮೂಂದೂಡಿ ಹಾಗೂ ಅವರುಗಳು ಅಮಾನತ್ತಿನಲ್ಲಿದ್ದ ಅವಧಿಯನ್ನು |

| | | | |
|---|---|---|---|
| | | 1544 | ಅಮಾನತ್ತಿನಲ್ಲಿದ್ದಂತೆಯೇ ಎಂದು ಪರಿಗಣಿಸಲಾಗಿದೆ. |
| 10. | ಬ್ರಹ್ಮಾವರಠಾಣಾಯುಡಿಆರ್ ನಂ:67/2024 ಕಲಂ 194(3)(iv) BNSS (ಮೃತ: ಬಿಜುಯೋಹನಾನ್ | 1)ಮಧು, ಪಿಎಸ್ ಐಬ್ರಹ್ಮಾವರಠಾಣೆ 2)ಸುಜಾತ<br><br>ಮಹೆಚ್‌ಸಿ 2028, ಬ್ರಹ್ಮಾವರಠಾಣೆ | ಸದರಿಅಧಿಕಾರಿ/ಸಿಬ್ಬಂದಿಗಳವಿರುದ್ಧದಆಪಾದನೆಗಾಗಿಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆಹಾಗೂಇಲಾಖಾಶಿಸ್ತುಕ್ರಮಜರುಗಿ ಸುವಹಂತದಲ್ಲಿದೆ. |
| 11. | ಹೊನ್ನಾವರಠಾಣಾಮೊ.ನಂ: 120/2023ಕಲಂ: 342, 324ಜೊತೆಗೆ34 ಹಾಗೂಯುಡಿಆರ್ ನಂ: 34/2023 ಕಲಂ: 174(3)(4) ಸಿ.ಆರ್.ಪಿ.ಸಿಐಪಿಸಿ **ಉತ್ತರಕನ್ನಡ** | 1) ಶ್ರೀಮಂಜುನಾಥಇ.ಓ, ಪೊಲೀಸ್ನಿರೀಕ್ಷಕರು,2) ಶ್ರೀಮಂಜೇಶ್ವರ ಚಂದಾವರ, ಪಿಎಸ್‌ಐ3) ಶ್ರೀಮಹಾವೀರಡಿ.ಎಸ್, ಸಿಪಿಸಿ-626,4) ಶ್ರೀಸಂತೋಷ ಬಾಳೇರಾಸಿಪಿಸಿ-1102, 5) ಶ್ರೀರಮೇಶ ಲಮಾಣಿಸಿಪಿಸಿ-1228, ಹೊನ್ನಾವರಠಾಣೆ, ಉತ್ತರಕನ್ನಡಜಿಲ್ಲೆ | ಸದರಿ ಅಧಿಕಾರಿ/ಸಿಬ್ಬಂದಿಗಳ ವಿರುದ್ಧದ ಆಪಾದನೆಗಾಗಿ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ. |
| 12. | ತರೀಕೆರೆಠಾಣಾಮೊ. ನಂ: 453/2016ಕಲಂ. 41(ಡಿ)-102ಸಿಆರ್ ಪಿಸಿರೆ/ವಿಕಲಂ, 379ಐಪಿಸಿ<br><br>(ಮೃತ: ಪ್ರದೀಪ)<br><br>**ಚಿಕ್ಕಮಗಳೂರು** | 1) ಶ್ರೀಮೂರ್ತಿ,ನಿವೃತ್ತಪಿಎಸ್‌ಐ, ಈಹಿಂದೆತರೀಕೆರೆಠಾಣೆ.<br><br>2) ಶ್ರೀರವಿ,ಸಿಹೆಚ್‌ಸಿ-140, ಚಿಕ್ಕಮಗಳೂರುಗ್ರಾಮಾಂತರಠಾಣೆ. (ಈಹಿಂದೆತರೀಕೆರೆಠಾಣೆ) | ಸರ್ಕಾರವು ಆದೇಶ ಸಂ: ಒಇ/ 82/ಪೊಸಿಇ/2023 ದಿ: 16-05-2024 ರಲ್ಲಿ, ಶ್ರೀಮೂರ್ತಿ, ನಿವೃತ್ತ ಪಿಎಸ್‌ಐ ರವರಿಗೆ ಕರ್ನಾಟ ಕನಾಗರೀಕ ಸೇವಾ ನಿಯಮಗಳು-1958ರ ನಿಯಮ-214ರ ಉಪಬಂಧಗಳನುಸಾರ ಸದರಿಯವರ ನಿವೃತ್ತಿ ವೇತನದಲ್ಲಿ ಶೇಕಡ50% ನ್ನು ಶಾಶ್ವತವಾಗಿ ಕಡಿತಗೊಳಿಸುವ ದಂಡನೆಯನ್ನು ವಿಧಿಸಿದೆ. ಹಾಗೂ ಶ್ರೀ.ರವಿ, ಸಿಹೆಚ್‌ಸಿ-140 ಚಿಕ್ಕಮಗಳೂರು ಗ್ರಾಮಾಂತರ ಠಾಣೆ (ಈ ಹಿಂದೆ ತರೀಕೆರೆ ಠಾಣೆ) ರವರಿಗೆ ಕೆಎಸ್ ಪಿ(ಡಿಪಿ) ನಿಯಮಗಳು-1965/89ರ ನಿಯಮಗಳು ಹಾಗು ತಿದ್ದುಪಡಿ ನಿಯಮಗಳು-2022ರ ನಿಯಮ-4(ಎ)(1)(ಬಿ)(ii) ರನ್ವಯ ಕಡ್ಡಾಯ ನಿವೃತ್ತಿಗೊಳಿಸಿದೆ. |
| 13. | ಎಸ್ ಪಿ ಚಿತ್ರದುರ್ಗ<br><br>ಹೊಳಲ್ಕೆರೆ ಪೊಲೀಸ್ ಠಾಣೆಯ ಮೊ.ಸಂ; 448/2016 ರ ಪೋಕ್ಸೋ ಪ್ರಕರಣದ ಎಸ್.ಸಿ.ನಂ: 28/2017 | (1) ಶ್ರೀ ಮೃತ್ಯುಂಜಯ. ಜಿ, ಎಆರ್‌ಎಸ್‌ಐ (2) ಶ್ರೀ ನಿಸಾರ್ ಅಹಮದ್, ಎಹೆಚ್‌ಸಿ–83 (3) ಶ್ರೀ ಆರ್. ಗುರುಮೂರ್ತಿ, ಎಹೆಚ್‌ಸಿ–23 (4) ಶ್ರೀ ಎನ್ ಪರಮೇಶ್ವರಪ್ಪ, | ಈ ಕಛೇರಿ ಆದೇಸ ಸಂ: ಸಿಬ್ಬಂದಿ(2)/ಇವಿ/03/2019, ಓ.ಬಿ. ಸಂ:280/2021, ದಿ:28.05.2021 ರಲ್ಲಿ ಶ್ರೀ ಮೃತ್ಯುಂಜಯ. ಜಿ, ಎಆರ್‌ಎಸ್‌ಐ, ಡಿಎಆರ್, ಚಿತ್ರದುರ್ಗ ರವರ 29 ವರ್ಷಗಳ ದೀರ್ಘಾ ಸೇವಾವಧಿಯಲ್ಲಿ ಪ್ರಸ್ತುತ ಆರೋಪವನ್ನು ಹೊರತುಪಡಿಸಿ ಯಾವುದೇ ಪ್ರತಿಕೂಲ ಷರಾ ಇಲ್ಲದೇ ಸೇವಾವಧಿ ಪೂರೈಸಿರುವುದನ್ನು |

| | | | |
|---|---|---|---|
| | ದಿನಾಂಕ: 20.03.2019 ರಲ್ಲಿ ಹೊಳಲ್ಕೆರೆ ಠಾಣೆಯ ಮೇಲ್ಕಂಡ ಮೋಕ್ಸೋ ಪ್ರಕರಣದಲ್ಲಿ ಘನ ನ್ಯಾಯಾಲಯವು ವಿಧಿಸಿದ ಶಿಕ್ಷೆಗೆ ಒಳಗಾದ 06 ಜನ ಶಿಕ್ಷಾಬಂಧಿಗಳಾದ ಬೆಂಗಾವಲು ಕರ್ತವ್ಯವನ್ನು ಗಂಭೀರವಾಗಿ ಪರಿಗಣಿಸಿ, ನಿಯಮಾನುಸಾರ ನಿಗಾವಹಿಸಿ ಬೆಂಗಾವಲು ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲರಾದ ಪ್ರಯುಕ್ತ 5 ನೇ ಆರೋಪಿ ವೀರಭದ್ರನು ತನ್ನೊಂದಿಗೆ ಸೇರಿ ಹ್ಯಾಂಡ್‌ಕಪ್‌ನಲ್ಲಿದ್ದ 3 ನೇ ಆರೋಪಿ ಸುನೀಲ್‌ನನ್ನು ಎಳೆದುಕೊಂಡು ಕೋರ್ಟ್‌ನ ಮೊದಲನೆ ಮಹಡಿಯ ಕೈಪಿಡಿ ಗೋಡೆಯಿಂದ ಕೆಳಗೆ ಜಿಗಿದಿದ್ದು, ಆಗ ಸುನಿಲನು ಅವನೊಂದಿಗೆ ಕೆಳಗೆ ಬಿದ್ದು, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಿಪ್ಪಿದ್ದು, 5ನೇ ಆರೋಪಿ ವೀರಭದ್ರಪ್ಪ ರವರಿಗೆ ಒಳಪೆಟ್ಟಾಗಿದ್ದು. ಈ ಕುರಿತು ಚಿತ್ರದುರ್ಗ ನಗರ ಠಾಣೆಯಲ್ಲಿ ಮೊ.ಸಂ:59/2019 ಕಲಂ:224 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಲು ಕಾರಣರಾದ ಬಗ್ಗೆ. | ಎಹೆಚ್‌ಸಿ-97 (5) ಶ್ರೀ ಜಿ. ಬಾಬಾಬುಡೇನ್, ಎಹೆಚ್‌ಸಿ-16<br>(6) ಶ್ರೀ ಬಿ.ಟಿ.ತಿಪ್ಪೇಸ್ವಾಮಿ, ಎಹೆಚ್‌ಸಿ-45(7) ಶ್ರೀ ಜಿ.ಕೆ ಗಿರೀಶ, ಎಪಿಸಿ-306<br><br>(8) ಶ್ರೀ ಶಿವರಾಜ್‌ಕುಮಾರ್, ಎಪಿಸಿ-464<br><br>(9) ಶ್ರೀ ಆರ್ ಚೇತನ್‌ಕುಮಾರ್, ಎಪಿಸಿ-349<br><br>(10) ಶ್ರೀ ಹಾಲೇಶ್, ಎಪಿಸಿ-303, ಡಿಎಆರ್, ಚಿತ್ರದುರ್ಗ | ಗಮನದಲ್ಲಿಟ್ಟುಕೊಂಡು ಮತ್ತು ದಿ:31.05.2021 ರಂದು ವಯೋನಿವೃತ್ತಿ ಹೊಂದುವ ಹಿನ್ನೆಲೆಯಲ್ಲಿ ನಿಮಗೆ ನೀಡಬಹುದಾದ ಪ್ರಸ್ತಾಪಿತ ಶಿಕ್ಷೆಯನ್ನು ಸಡಿಲಗೊಳಿಸಿ, "ಸೆನ್ಸೂರ್" ನೀಡಿ, ಅಮಾನತ್ತಿನ ಅವಧಿ ದಿ:23.03.2019 ರಿಂದ 12.04.2019 ರವರೆಗೆ 21 ದಿನಗಳನ್ನು "ಅಮಾನತ್ತೆಂದು" ಪರಿಗಣಸಲಾಗಿರುತ್ತದೆ.<br><br>(2) ಶ್ರೀ ನಿಸಾರ್ ಅಹಮದ್, ಎಹೆಚ್‌ಸಿ-83, ಶ್ರೀ ಆರ್. ಗುರುಮೂರ್ತಿ, ಎಹೆಚ್‌ಸಿ-23, ಶ್ರೀ ಎನ್ ಪರಮೇಶ್ವರಪ್ಪ, ಎಹೆಚ್‌ಸಿ-97, ಶ್ರೀ ಜಿ. ಬಾಬಾಬುಡೇನ್, ಎಹೆಚ್‌ಸಿ-16, ಶ್ರೀ ಬಿ.ಟಿ.ತಿಪ್ಪೇಸ್ವಾಮಿ, ಎಹೆಚ್‌ಸಿ-45, ಡಿಎಆರ್, ಚಿತ್ರದುರ್ಗ ರವರುಗಳ ವೇತನವನ್ನು ಎಹೆಚ್‌ಸಿ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ ಅವರ ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗುವಂತೆ (ಘುಣಖ ಜಿಜಿಜಿಜಿಭಿಣ) 03 (ಮೂರು) ವರ್ಷಗಳ ಕಾಲ ಇಳಿಸಲಾಗಿದೆ ಮತ್ತು ಅಮಾನತ್ತಿನ ಅವಧಿ ದಿ:23.03.2019 ರಿಂದ 12.04.2019 ರವರೆಗೆ 21 ದಿನಗಳನ್ನು "ಅಮಾನತ್ತೆಂದು" ಪರಿಗಣಿಸಲಾಗಿರುತ್ತದೆ.<br><br>(3) ಶ್ರೀ ಜಿ.ಕೆ ಗಿರೀಶ, ಎಪಿಸಿ-306, ಶ್ರೀ ಶಿವರಾಜ್‌ಕುಮಾರ್, ಎಪಿಸಿ-464, ಶ್ರೀ ಆರ್ ಚೇತನ್‌ಕುಮಾರ್, ಎಪಿಸಿ-349 ಮತ್ತು ಶ್ರೀ ಹಾಲೇಶ್, ಎಪಿಸಿ-303, ಡಿಎಆರ್, ಚಿತ್ರದುರ್ಗ ರವರುಗಳ ವೇತನವನ್ನು ಎಪಿಸಿ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ ಅವರ ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗುವಂತೆ (ಘುಣಖ ಜಿಜಿಜಿಜಿಭಿಣ) 03 (ಮೂರು) ವರ್ಷಗಳ ಕಾಲ ಇಳಿಸಲಾಗಿದೆ ಮತ್ತು ಅಮಾನತ್ತಿನ ಅವಧಿ ದಿ:23.03.2019 ರಿಂದ 12.04.2019 ರವರೆಗೆ 21 ದಿನಗಳನ್ನು "ಅಮಾನತ್ತೆಂದು" ಪರಿಗಣಿಸಲಾಗಿರುತ್ತದೆ. |
| 14. | ಐಜಿಪಿ ದಕ್ಷಿಣ ವಲಯ ಮೈಸೂರು ಮೊ.ಸಂ:182/2018,<br><br>ಕಲಂ 379 ಐಪಿಸಿ ಪ್ರಕರಣ | ಶ್ರೀ ಆನಂದ್‌ಕುಮಾರ್, ಪಿಎಸ್‌ಐ, (ಹಾಲಿ ಪಿಐ )ಶ್ರೀ.ಯು.ಮಾದೇಶ್, ಎಎಸ್‌ಐ, ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ ಮತ್ತು ಶ್ರೀ ಮಲ್ಲಿಕಾರ್ಜುನ ಚುಳಕಿ, ಸಿಪಿಸಿ-140, ಹಲಗೂರು | ಈ ಕಛೇರಿ ಆದೇಶ ಸಂಖ್ಯೆ: ಸಿಬ್ಬಂದಿ-3/ಡಿಇ/06/2018-19, ದಿನಾಂಕ: 31-12-2020ರನ್ವಯ ಶ್ರೀ ಆನಂದ್‌ಕುಮಾರ್, ಪಿಎಸ್‌ಐರವರ ವಾರ್ಷಿಕ ವೇತನ ಬಡ್ತಿಯನ್ನುಒಂದು ವರ್ಷಗಳ ಕಾಲ ಅಡ್ಡಿಯಾಗದಂತೆ ಮುಂದೂಡಲಾಗಿದೆ.<br><br>ಶ್ರೀ ಯು. ಮಾದೇಶ್, ಎಎಎಸ್‌ಐ ಮತ್ತು ಶ್ರೀ ಮಲ್ಲಿಕಾರ್ಜುನ ಚುಳಕಿ, ಸಿಪಿಸಿ-140 ರವರುಗಳ ವಿರುದ್ಧ ಈ ಕಛೇರಿ ಆದೇಶ |

| | | | |
|---|---|---|---|
| | | ಪೊಲೀಸ್ ಠಾಣೆ, ಮಂಡ್ಯ . | ಸಂಖ್ಯೆ: ಸಿಬ್ಬಂದಿ-3/ಇವಿ/06/2018-19, ದಿನಾಂಕ: 19-8-202 . ರನ್ವಯ ಮರು ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ. ಇಲಾಖಾ ವಿಚಾರಣೆ ಬಾಕಿ ಇದೆ. |
| 15. | ಮೊ. ಸಂ: 115/2022 ಕಲಂ.363 ಐಪಿಸಿ | ಶ್ರೀ ಹೆಚ್.ಬಿ.ಮಾದೇಗೌಡ ಪಿಎಸ್ಐ ಮತ್ತು ಶ್ರೀ ಎನ್.ಚೆಲುವರಾಜು, ಎಎಸ್ಐ ಇಬ್ಬರೂ ಈ ಹಿಂದೆ ಅಗರಮಾಂಬಳ್ಳಿ ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ | ಆರೋಪಿತ ಪೊಲೀಸ್ ಅಧಿಕಾರಿರವರುಗಳ ವಿರುದ್ಧ ಆರೋಪ ಸಾಭೀತಾಗದ ಕಾರಣ ಈ ಕಛೇರಿ ಆದೇಶ ಸಂಖ್ಯೆ: ಸಿಬ್ಬಂದಿ-3/ಇವಿ/37/2022-23, ದಿನಾಂಕ: 4-10-2023 ರನ್ವಯ ಆರೋಪದಿಂದ ದೋಷಮುಕ್ತಗೊಳಿಸಲಾಗಿದೆ. |
| 16. | ಮೊ.ಸಂ.222/2015. ಕಲಂ 109-114-217-218-302-242-504-506-509-357 ರೆ: 34 ಐಪಿಸಿ | ಶ್ರೀ ಲೋಕೇಶ್ ಪಿಎಸ್ಐ.<br>ಶ್ರೀ ಆನಂದ, ಸಿಪಿಸಿ-78<br>ಶ್ರೀ ಸತೀಶ ಜಿ.ಎಸ್. ಸಿಪಿಸಿ-67 | ಅಧಿಕಾರಿ/ಸಿಬ್ಬಂದಿಯವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲಾಗಿದ್ದು, ವಿಚಾರಣೆಯಲ್ಲಿ ಆರೋಪ ಸಾಭೀತಾಗದ ಕಾರಣ ದೋಷಮುಕ್ತರನ್ನಾಗಿ ಮಾಡಲಾಗಿರುತ್ತದೆ. |
| 17. | ಐಜಿಪಿ ಕೇಂದ್ರ ವಲಯ ತುಮಕೂರು ಸಂಚಾರ ಪಿಎಸ್, ಮೊ ಸಂ:133/2017, ಕಲಂ 279 304(ಎ) ಐಪಿಸಿ<br>ಹೊನ್ನಳ್ಳಿ ರೈಲ್ವೇ ನಿಲ್ದಾಣದಲ್ಲಿ ಬ್ಯಾಗುಗಳನ್ನು ಕದಿಯಲು ಪ್ರಯತ್ನಿಸುತ್ತಿದ್ದಾಗ ತನಿಕೆಗಾಘಿ ಕರೆ ತರುತ್ತಿದ್ದಾಗ ತಪ್ಪಿಸಿಕೊಂಡು ಹೋಗಿ ಕೆಎಸ್ಆರ್‌ಟಿಸಿ ಬಸ್ಸ ಗೆ ಸಿಲುಕಿ ಮೃತ ಪಟ್ಟಿರುತ್ತಾರೆ. | ಮಂಜುನಾಥ್ ಹೆಚ್‌ಸಿ-12, ಧನಂಜಯ ಆರ್ ಹೆಚ್‌ಸಿ-21, ಹರೀಶ್ ಕುಮಾರ್ ಆರ್ ಪಿಸಿ-21 | ಸಿಐಟಿ ಇಂದ ಬಿ ಅಂತಿಮ ವರದಿ ಸಲ್ಲಿಸಲಾಗಿದೆ. ಕರ್ತವ್ಯ ಲೋಪ ಎಸಗಿದ ಮಂಜುನಾಥ್ ಹೆಚ್‌ಸಿ-12, ಧನಂಜಯ ಆರ್ ಹೆಚ್‌ಸಿ-21, ಹರೀಶ್ ಕುಮಾರ್ ಆರ್ ಪಿಸಿ-21 ರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡಲಾಗಿದೆ. |
| 18. | ತುಮಕೂರು ನಗರ ಪೊಲೀಸ್ ಠಾಣಾ ಮೊ.ಸಂ: 127/2018, ಕಲಂ 143, 147, 148, 149, 323, 324, 342 ಐಪಿಸಿ | ಪಿಎಸ್ಐ ಶಿವಕುಮಾರ್.ವಿ.ಎಸ್, ನಾಗರಾಜು, ಸಿಹೆಚ್‌ಸಿ ಮತ್ತು ರಾಮಚಂದ್ರಪ್ಪ, ಸಿಪಿಸಿ | ಗಾಯಾಳು ಮೊಹಮದ್ ಅಫ್ತಾ ಈತನಿಗೆ ಸಾರ್ವಜನಿಕರು ಹಲ್ಲೆ ನಡೆಸಿದ್ದು, ಸಾರ್ವಜನಿಕರು ಹಲ್ಲೇ ಮಾಡಿರುವ ವಿಚಾರ ತಿಳಿದಿದ್ದರೂ ಸಹ ಆಸ್ಪತ್ರೆಗೆ ತೋರಿಸದೇ ಠಾಣೆಗೆ ಕರೆತಂದಿರುವ ಬಗ್ಗೆ ಪಿಎಸ್ಐ ಶಿವಕುಮಾರ್.ವಿ.ಎಸ್, ನಾಗರಾಜು, ಸಿಹೆಚ್‌ಸಿ ಮತ್ತು ರಾಮಚಂದ್ರಪ್ಪ, ಸಿಪಿಸಿ ರವರುಗಳ ಮೇಲೆ ಶಿಸ್ತು ಕ್ರಮ ಜರುಗಿಸಿ 3 ತಿಂಗಳ ವಾರ್ಷಿಕ ವೇತನ ಬಡ್ತಿಯನ್ನು ಮುಂದೂಡಲಾಗಿರುತ್ತದೆಂದು ತಿಳಿಸಿರುತ್ತಾರೆ. |
| 19. | ಹಂದನಕೆರೆ ಪೊಲೀಸ್ ಠಾಣಾ ಮೊ.ಸಂ: 97/2023, ಕಲಂ 343, 331, 304, 34 ಐಪಿಸಿ | - | ಸದರಿ ಪ್ರಕರಣವು ಹಾಲಿ ಸಿಐಡಿ ಘಟಕದಲ್ಲಿ ತನಿಖೆಯಲ್ಲಿರುತ್ತದೆ. |

| | | | |
|---|---|---|---|
| 20. | ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಮೊ.ಸಂ:11/2021, ಕಲಂ 174(ಸಿ) ಸಿಆರ್‌ಪಿಸಿ (ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಮೊ.ಸಂ:58/2021 ಕಲಂ ಮನುಷ್ಯ ಕಾಣೆ ರೀತ್ಯಾ ಪ್ರಕರಣದ ಆರೋಪಿಗಳನ್ನು ದಿನಾಂಕ:11.03.2021 ರಂದು ರಾತ್ರಿ 2-00 ಗಂಟೆಗೆ ಕರೆತಂದು ಬೆಳಿಗ್ಗೆ ವಿಚಾರಣೆ ಮಾಡುವ ಸಂಬಂಧ ಠಾಣಾ ಲಾಕಪ್‌ನಲ್ಲಿರಿಸಿದ್ದು, ಸದರಿ ಆಪಾದಿತನು ಠಾಣಾ ಶೌಚಾಲಯಲ್ಲಿದ್ದ ಫಿನಾಯಿಲ್ ಕುಡಿದು ಅತ್ಮಹತ್ಯೆಗೆ ಯತ್ನಿಸಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುವ ಬಗ್ಗೆ. | 1. ಶ್ರೀ ಬಾಲನಾಯ್ಕ, ಎಎಸ್‌ಐ,<br>2. ಶ್ರೀ ರೇವಣ್ಣ, ಸಿಹೆಚ್‌ಸಿ-291 | ಸದರಿ ಪೊಲೀಸ್ ಸಿಬ್ಬಂದಿಯವರುಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಕೆಎಸ್‌ಪಿ (ಡಿಪಿ) ನಿಯಮ 7 ರನ್ವಯ ದೋಷರೋಪಣಾ ಪತ್ರ ಹೊರಡಿಸಿ, ಆದೇಶ ಸಂಖ್ಯೆ:01/ಸಿಬ್ಬಂದಿ(2)/ಶಿಕ್ಷೆ/2020, ಓ.ಬಿ.ಸಂಖ್ಯೆ:65/2022, ದಿನಾಂಕ:16.02.2022 ರಲ್ಲಿ ವಾಗ್ದಂಡನೆ ವಿಧಿಸಿ, ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಿರುವುದಾಗಿ ತಿಳಿಸಿರುತ್ತಾರೆ. |
| 21. | ಬೊಮ್ಮನಹಳ್ಳಿ ಪೊ.ಠಾಣೆ ಮೊ.ಸಂ: ಯುಡಿಆರ್ ಸಂಖ್ಯೆ:65/2016 ಮತ್ತು 627/2016, ಕಲಂ.309(ಐಪಿಸಿ), ದಿನಾಂಕ:24.11.2016 ರಂದು ಶಿವಕುಮಾರ್ ಬಿನ್ ಲೇಟ್ ಕೃಷ್ಣಪ್ಪ, 51 ವರ್ಷ ಎಂಬುವವರು ಠಾಣೆಗೆ ಹಾಜರಾಗಿ ನೀಡಿದ ದೂರು ಏನೆಂದರೆ ತಾನು ಚನ್ನಕೇಶವನಗರ ಹೊಸ ರಸ್ತೆ ವಾಸಿಯಾಗಿದ್ದು, ತನಗೆ ಗಂಡು ಮಗು ಮತ್ತು ಒಂದು ಹೆಣ್ಣು ಮಗಳಿರುತ್ತಾಳೆ, ನನ್ನ ಮಗ ರವಿಕುಮಾರ್ 21 ವರ್ಷ ಈತನು 6ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದು ನಂತರ ಶಾಲೆ ಬಿಟ್ಟು ಮೊಬೈಲ್ ಅಂಗಡಿ, ಗಾರ್ಮೆಂಟ್ ಗಳಲ್ಲಿ ಕೆಲಸ ಮಾಡಿಕೊಂಡಿದ್ದು, ನಂತರ ಕೆಲಸಕ್ಕೆ ಹೋಗದೆ ಪೋಲಿ ಹುಡುಗರ ಜೋತೆ ಸೇರಿಕೊಂಡು ಕೆಟ್ಟ ಅಭ್ಯಾಸಗಳನ್ನು ರೂಡಿಸಿಕೊಂಡು, ಸ್ನೇಹಿತರೊಂದಿಗೆ ಸೇರಿಕೊಂಡು ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದು ಈ ಹಿಂದೆ 2014 ನೇ ಸಾಲಿನಲ್ಲಿ ಮಡಿವಾಳ ಪೊಲೀಸ್ ಠಾಣೆಯಲ್ಲಿ ಅರೆಸ್ಟ್ ಆಗಿ ಜೈಲಿಗೆ ಹೋಗಿ ಬಂದಿರುತ್ತಾನೆ. ಜೈಲಿನಿಂದ ಬಂದ ನಂತರವು ಸಹ ಪೋಲಿ ಹುಡುಗರ ಜೊತೆ ಸೇರಿಕೊಂಡು ಸರಿಯಾಗಿ ಮನೆಗೆ ಬರುತ್ತಿರಲಿಲ್ಲ, ಈಗ್ಗೆ ಇರುವಾಗ್ಗೆ ದಿನಾಂಕ:19.11.2016 ರಂದು ರಾತ್ರಿ ಪಿರ್ಯಾದುದಾರರಿಗೆ ಪ್ರಶಾಂತ್ ಆಸ್ಪತ್ರೆಯಿಂದ ಪೋನ್ ಮಾಡಿ ರವಿಕುಮಾರ್ ಎಂಬುವವರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ ಆಸ್ಪತ್ರೆಗೆ ಬನ್ನಿ ಎಂದು ತಿಳಿಸಿದ ಮೇರೆಗೆ ಪ್ರಶಾಂತ್ ಆಸ್ಪತ್ರೆಗೆ ಹೋಗಿ ವಿಚಾರ ಮಾಡಲಾಗಿ ನನ್ನ ಮಗ ರವಿಕುಮಾರ್ ಹೆಚ್ಚಿನ ಚಿಕಿತ್ಸೆಗಾಗಿ ಸೆಂಟ್ ಜಾನ್ಸ್ ಆಸ್ಪತ್ರೆಗೆ ದಾಖಲು ಮಾಡಿದ್ದು ನನ್ನ ಮಗನ ಹೊಟ್ಟೆ ಹತ್ತಿರ, ಕತ್ತಿನ ಹತ್ತಿರ ಮುಖ ಎರಡು ಕೈಗಳು ಸುಟ್ಟ ಗಾಯಗಳಾಗಿದ್ದವು ನಾನು ನನ್ನ ಮಗನನ್ನು ವಿಚಾರಿಸಿದಾಗ ಆತ ದಿನಾಂಕ:19.11.2016 ರಂದು ಮಧ್ಯಾಹ್ನ 02-30 ರ ಸಮಯದಲ್ಲಿ ಗಾರ್ವೆಬಾವಿಪಾಳ್ಯ ಮದರ್ ತೆರೆಸಾ ಶಾಲೆ ಖಾಲಿ ಜಾಗದಿಂದ ಪೊಲೀಸರು ನನ್ನನ್ನು ಹಿಡಿದುಕೊಂಡು 03-00 ಗಂಟೆಯಲ್ಲಿ ಅರೆಸ್ಟ್ ಮಾಡಿರುತ್ತಾರೆ, ನಾನು ಕಳ್ಳತನ ಮಾಡಿರುವ ಬೈಕ್‌ಗಳನ್ನು ರಿಕವರಿ ಮಾಡಿ ಜೈಲಿಗೆ ಕಳುಹಿಸುತ್ತಾರೆ ಎಂದು ಇದರಿಂದ ನಿಮಗೆ ಅವಮಾನ ಆಗುತ್ತದೆ ಎಂದು ಭಯಪಟ್ಟುಕೊಂಡು ರಾತ್ರಿ 07-30 ಗಂಟೆಯ ಸಮಯದಲ್ಲಿ ಬಾತ್‌ರೂಂಗೆ | )ಶ್ರೀ ಫ್ರಾನ್ಸಿಸ್ ಪಿ.ಎಸ್.ಐ<br>2) ಶ್ರೀ ರಾಜು ಹೆಚ್.ಸಿ 6632 ,<br>3)ಶ್ರೀ ಸಂಜಯ್ ಬನಸೋಡೆ, ಪಿ.ಸಿ 11162 | ಸದರಿ ಸಿಬ್ಬಂದಿಗಳನ್ನು ಅಮಾನತ್ತುಗೊಳಿಸಿರುತ್ತದೆ.<br>ಸದರಿಯವರುಗಳ ವಿರುದ್ದ ಇಲಾಖಾ ವಿಚಾರಣೆಯಲ್ಲಿಆರೋಪ ಸಾಬೀತಾಗದ ಕಾರಣ ದೋಷಮುಕ್ತಿಗೊಂಡಿರುತ್ತಾರೆ.<br>ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಸಿಐಡಿ ಹೆಚ್‌ಆಂಡ್‌ಬಿ ವಿಭಾಗಕ್ಕೆ ವರ್ಗಾವಣೆ ನೀಡಿರುತ್ತದೆ. |

| | | | |
|---|---|---|---|
| | ಹೋಗುತ್ತೇನೆಂದು ಅಲ್ಲಿದ್ದ ಪೊಲೀಸರಿಗೆ ತಿಳಿಸಿ ಬಾತ್ ರೂಂನಲ್ಲಿ ಬೆಂಕಿ ಹಚ್ಚಿಕೊಂಡಿರುತ್ತೇನೆ, ಎಂದು ತಿಳಿಸಿರುತ್ತಾನೆ, ಇದಕ್ಕೆ ಯಾರು ಕಾರಣರಲ್ಲ ನಾನೆ ಬೆಂಕಿ ಹಚ್ಚಿಕೊಂಡಿರುತ್ತೇನೆ ಎಂದು ತಿಳಿಸಿರುತ್ತಾನೆ, ಸೆಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ನನ್ನ ಮಗ ರವಿ @ ಚಪ್ಪರ್ ರವಿ ಈ ದಿನ ಬೆಳಿಗ್ಗೆ 09-35 ಗಂಟೆಯ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ ಎಂದು ಕೊಟ್ಟ ದೂರು ಇತ್ಯಾದಿ. | | |
| 22. | ಜೆ.ಬಿ ನಗರ ಪೊ.ಠಾಣೆ, ಮೊ.ಸಂ:ಯುಡಿಆರ್ ನಂ.12/2016 ಮತ್ತು ಮೊ.ಸಂ.65/2017 ಕಲಂ.304, 326, 324 ರ/ವಿ-34 ಐಪಿಸಿ.<br><br>ಈ ಕೇಸಿನ ಸಂಕ್ಷಿಪ್ತ ಸಾರಾಂಶವೇನೆಂದರೆ 19-03-2016 ರಂದು 18.30 ಗಂಟೆಯ ಸಮಯದಲ್ಲಿ ಜೀವನ್ ಬೀಮಾ ನಗರ ಪೊಲೀಸ್ ಠಾಣೆ ಮೊ ಸಂ-89/2016 ಕಲಂ 381 ಐಪಿಸಿ ಕೇಸಿನಲ್ಲಿ ಅನುಮಾನಾಸ್ಪದ ಆಸಾಮಿಯಾದ ಮಹೇಂದ್ರ ರಾಥೋಡ ಈತನನ್ನು ವಿಚಾರಣೆಗಾಗಿ ಅಪರಾದ ವಿಭಾದ ಸಿಬ್ಬಂದಿಯವರಾದ 1) ಹೆಜಾಜ್ ಖಾನ್, ಹೆಚ್.ಸಿ-6794, 2) ಕೇಶವ ಮೂರ್ತಿ, ಪಿ.ಸಿ-11630, 3) ಮೋಹನ್ ರಾಮ್, ಪಿ.ಸಿ.8958, 4) ಸಿದ್ದಪ್ಪ ಬೊಮ್ಮನಹಳ್ಳಿ, ಪಿಸಿ-12509, ರವರು ಆಗಿನ ಪಿ.ಐ ಆದೇಶ ದಂತೆ ಜೀವನ ಭೀಮಾ ನಗರ ಪೊಲೀಸ್ ಠಾಣೆಗೆ ಕರೆತಂದು ವಿಚಾರಣೆ ಮಾಡುತ್ತಿರುವಾಗ ಸಂಜೆ 18-30 ಗಂಟೆಯ ಸಮಯದಲ್ಲಿ ಅನುಮಾನಸ್ಪದ ಆರೋಪಿ ಮಹೇಂದ್ರ ರಾಥೋರ್ ಉಸಿರಾಡಲು ತೊಂದರೆಯಾಗಿದ್ದು ಎದೆ ನೋವು ಎಂದು ಹೇಳಿಕೊಂಡು ಉಸಿರಾಡಲು ಕಷ್ಟಪಡುತ್ತಾ ಅಸ್ವಸ್ಥಗೊಂಡಾತನನ್ನು ಇಂದಿರಾನಗರ ಸಿ.ಎಮ್.ಹೆಚ್ ಆಸ್ಪತ್ರೆಗೆ ಚೀಕಿತ್ಸೆ ಬಗ್ಗೆ ಕರೆದುಕೊಂಡು ಹೋಗಿದ್ದು ಪರಿಕ್ಷಿಸಿದ ವೈದ್ಯರು ಮೃತ ಪಟ್ಟಿರುವುದಾಗಿ ತಿಳಿಸಿದರು ಈ ಬಗ್ಗೆ ಹಿರಿಯ ಅಧಿಕಾರಿಗಳ ಆದೇಶದ ಮೇರೆಗೆ ಜೀವನ್ ಭೀಮಾ ನಗರ ಪೊಲೀಸ್ ಠಾಣೆ ಯು.ಡಿ.ಆರ್ ಸಂಖೆ 12/2016 ಕಲಂ 174 (ಸಿ) ಸಿ.ಆರ್.ಪಿ.ಸಿ ರೀತ್ಯಾ ಪ್ರಕರಣ ದಾಖಲು ಮಾಡಿಕೊಂಡು ಮೃತನ ಲಾಶ್ ನ್ನು ವೈದ್ಯಕಿಯ ಪರೀಕ್ಷೆಗೆ ಕಳುಹಿಸಿದ್ದು ಪರೀಕ್ಷಿಸಿದ್ದ ವಿದಿ ವಿಜ್ಞಾನ ಪ್ರಾಧ್ಯಾಪಕರು ಅನುಮಾನಾಸ್ಪದ ಆರೋಪಿ ಮಹೇಂದರ ರಾಥೋರ್ ನನ್ನು ಠಾಣೆಯಲ್ಲಿ ವಿಚಾರಣೆಗೊಳಿಸು ಸಮಯದಲ್ಲಿ ಆತನಿಗೆ ದೈಹಿಕ ಹಿಂಸೆಗೆ ಗುರಿಪಡಿಸಿ ಹಿಂಸೆಗೆ ಉಂಟಾದಂತ ಸ್ಥಿತಿ ಯಿಂದ ಮಹೇಂದ್ರ ರಾಥೋರ್ ಮೃತಪಟ್ಟಿರುವುದು ಹಾಗೂ ಸದರಿ ಯವರು ತಮ್ಮ ವರದಿ Opinion On perusal of all the stated above, we are of the opinion that death due to vaso-occlusive crisis in brain, kidney, heart, and lung following | 1.ಏಜಾಜ್‌ಖಾನ್ ಹೆಚ್.ಸಿ.6794<br>2.ಮೋಹನ್‌ರಾಮ್ ಪಿ.ಸಿ.8953<br>3.ಕೇಶವಮೂರ್ತಿ ಪಿ.ಸಿ.11630<br>4.ಸಿದ್ದಪ್ಪ ಬೊಮ್ಮನಹಳ್ಳಿ ಪಿ.ಸಿ.12509" | ಮಾನ್ಯಸಿಸಿಹೆಚ್-51 ನ್ಯಾಯಾಲಯವುಎಸ್ಸಿ ನಂ.1723/2019 ರಲ್ಲಿ 4 ಜನರಿಗೆ<br>7 ವರ್ಷಶಿಕ್ಷೆವಿಧಿಸಿದೆ<br>1.ಏಜಾಜ್‌ಖಾನ್ ಹೆಚ್.ಸಿ.6794<br>2.ಮೋಹನ್‌ರಾಮ್ ಪಿ.ಸಿ.8953<br>3.ಕೇಶವಮೂರ್ತಿ ಪಿ.ಸಿ.11630<br>4.ಸಿದ್ದಪ್ಪ ಬೊಮ್ಮನಹಳ್ಳಿ ಪಿ.ಸಿ.12509" ರವರುಗಳನ್ನು ದಿ:13.02.2025ರಂದು ಸೇವೆಯಿಂದ ವಜಾ ಮಾಡಲಾಗಿದೆ. |

| | | | |
|---|---|---|---|
| | phisical exertion cannot be ruled out. Associated with ante-mortem soft tissue injuries and fracture right fifth Metatarsal bone. ಎಂದು ಅಭಿಪ್ರಾಯ ನೀಡಿರುತ್ತಾರೆ. | | |
| 23. | ಸಂಪಿಗೇಹಳ್ಳಿ ಪೊಲೀಸ್ ಠಾಣೆ ಮೊ.ಸಂ. 59/2017 ಕಲಂ 392 ಐಪಿಸಿ ಪ್ರಕರಣದಲ್ಲಿ ಆರೋಪಿಯಾದ ರಮೇಶ ಬಿನ್ ಸಿದ್ದಲಿಂಗಪ್ಪ ಇತನನ್ನು ಪೊಲೀಸ್ ಅಭಿರಕ್ಷೆಯಲ್ಲಿದ್ದಾಗ, ಮದ್ಯ ರಾತ್ರಿ 2 ಗಂಟೆಯ ಸಮಯದಲ್ಲಿ ಅನಾರೋಗ್ಯದಿಂದ ಅರೆಪ್ರಜ್ಞಾವಸ್ಥೆಯ್ಲಲಿದ್ದು, ಕೂಡಲೇ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದ ಮೃತಪಟ್ಟಿರುತ್ತಾನೆ. | ಪೊಲೀಸ್ ಅಧಿಕಾರಿಗಳು ಮತ್ತು ಹೆಚ್‌ಸಿ | ಪೊಲೀಸ್ ಅಧಿಕಾರಿಗಳ ಹೆಚ್‌ಸಿ ರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿರುತ್ತದೆ ಮತ್ತು ಒಂದು ವಾರ್ಷಿಕ ವೇತನವನ್ನು ಮುಂದೂಡಲಾಗಿದೆ. |
| 24. | ಆರ್.ಎಂ ನಗರ ಬೆಂಗಳೂರು ನಗರದ ಪೊಲೀಸ್ ಠಾಣೆಯ ಯುಡಿಆರ್ ಸಂ:74/2018 , ಮೊ.ಸಂ 524/2018 ಕಲಂ 302 392 ಐಪಿಸಿ ಪ್ರಕರಣದಲ್ಲಿ ಗುಮಾನಿ ಆಸಾಮಿಯಾದ ಪಿ. ಕೃಷ್ಣ ಮೂರ್ತಿ ಬಿನ್ ಪೆರುಮಾಳ್, 53 ವರ್ಷ ವಯಸ್ಸು, ವಾಸ ನಂ. 18, 8ನೇ ಕ್ರಾಸ್, ಎಕ್ಸ್ ಸರ್ವೀಸ್ ಮೆನ್ ಕಾಲೋನಿ, ಬಾಣಸವಾಡಿ, ಬೆಂಗಳೂರು-43 ಎಂಬಾತನನ್ನು ದಿನಾಂಕ: 02.12.2018 ರಂದು ಮದ್ಯಾಹ್ನ ಸುಮಾರು 12.00 ಗಂಟೆಯ ಸಮಯದಲ್ಲಿ ವಿಚಾರಣೆಗಾಗಿ ಠಾಣೆಗೆ ಕರೆದುಕೊಂಡು ಬಂದಿದ್ದು ವಿಚಾರಣಾ ಕಾಲದಲ್ಲಿ ಆರೋಪಿಯು ತಾನು ಈ ಕೊಲೆಯನ್ನು ಮಾಡಿರುವುದಾಗಿ ಒಪ್ಪಿಕೊಂಡು ತನ್ನ ಸ್ವಾ ಇಚ್ಚಾ ಹೇಳಿಕೆಯನ್ನು ನೀಡಿದ್ದು ಆರೋಪಿಯು ಸ್ವಾ ಇಚ್ಚಾ ಹೇಳಿಕೆಯಲ್ಲಿ ಚಾಕು ಮತ್ತು ಮೃತಳ ಚಿನ್ನದ ಚೈನನ್ನು ಇಟ್ಟಿದ್ದ ಸ್ಥಳವನ್ನು ತೋರಿಸುವುದಾಗಿ ತಿಳಿಸಿದ್ದು ಅದರಂತೆ ಆರೋಪಿಯನ್ನು ಸ್ಥಳಕ್ಕೆ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಹೋಗಿ ವಸ್ತುಗಳನ್ನು ವಶಕ್ಕೆ ಪಡೆದು ಪಂಚರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಆರೋಪಿಯು ತನಗೆ ಎದೆ ನೋವು ಬರುತ್ತಿದೆ ಎಂದು ಕಲ್ಲಿನ ಮೇಲೆ ಕುಸಿದ್ದು ಬಿದ್ದಿದ್ದು ತಕ್ಷಣ ಕೋಶಿಸ್ ಆಸ್ಪತ್ರೆಗೆ ಕರೆತಂದು ಚಿಕಿತ್ಸೆಗೆ ದಾಖಲಿಸಿದ್ದು ವೈದ್ಯರು ಚಿಕಿತ್ಸೆ ಫಲಕಾರಿಯಾಗದೆ ಮೃಥಪಟ್ಟಿರುವುದಾಗಿ ತಿಳಿಸಿದ್ದು ಆರೋಪಿ ಕೃಷ್ಣಮೂರ್ತಿ ತನ್ನ ಹೆಂಡತಿ ಮೇಘಲಾದೇವಿ ಕೊಲೆ ಪ್ರಕರಣದಲ್ಲಿ ಬಾಗಿಯಾಗಿ ಇದರಿಂದ ವಿಚಲಿತಗೊಂಡು ಎದೆನೋವಿನಿಂದ ಕುಸಿದು ಬಿದ್ದು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿರುತ್ತಾನೆಂದು ದೂರು. | ಸಂಬಂದಪಟ್ಟ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು | ಸಿಐಡಿ ಯಿಂದ ವಿಚಾರಣೆ ನಡೆದು ಮಾನ್ಯ ಎಸ್‌ಡಿಎಂ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ನಿವೇದಿಸಿಕೊಂಡಿರುತ್ತಾರೆ |
| 25. | ಅಮೃತಹಳ್ಳಿ ಪೊ.ಠಾಣೆ ಯುಡಿಆರ್ ಸಂ.34/2018 ಮತ್ತು ಮೊ.ಸಂ.159/2018, ಕಲಂ.224. ದಿನಾಂಕ 20-09-18 ರಂದು ಆರೋಪಿಯು ಪೊಲೀಸರನ್ನು ತಳ್ಳಿ 2ನೇ ಮಹಡಿಯಿಂದ ಬಿದ್ದು | 1)Pampa Nayak HC 4`473<br>2)Lepakshppa, PC 7481<br>3)Vasantha Kumar PC4523 | )Pampa Nayak HC 4`473<br>2)Lepakshppa, PC 7481<br>3)Vasantha Kumar PC4523<br>ರವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಿ ವಾಗ್ದಂಡನೆ ವಿಧಿಸಲಾಗಿದೆ. |

| | | | |
|---|---|---|---|
| | ಮೃತಹೊಂದಿರುತ್ತಾನೆ. | | |
| 26. | ತಿಲಕ್ ನಗರ ಪೊಲೀಸ್ ಠಾಣೆ ಯುಡಿಆರ್ ಸಂ:01/2018 ದಿನಾಂಕ 19-01-18 ರಂದು ಸಾಧಿಕ್ ಪಾಷ ಇತನನ್ನು ತಿಲಕನಗರ ಪೊಲೀಸ್ ಠಾಣೆಯ ಸಂಬಂಧ ತನಿಖೆಗಾಗಿ ಕರೆದುಕೊಂಡು ಹೋಗಿದ್ದಾಗ, ಎದೆ ನೋವು ಎಂದು ತಿಳಿಸಿದ ಮೇರೆಗೆ, ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದ ಮೃತಹೊಂದಿರುತ್ತಾನೆ. | ಯಾವುದೇ ಅಧಿಕಾರಿ ಮತ್ತು ಸಿಬ್ಬಂದಿರವರ ಮೇಲೆ ಇಲಾಖೆಯ ವಿಚಾರಣೆ ಕೈಗೊಂಡಿರುವುದಿಲ್ಲ | ಈ ಪ್ರಕರಣದಲ್ಲಿ ಮೃತ ಸೈಯದ್ ಸಾದಿಕ್ ಪಾಷನು ಎದೆ ನೋವಿನಿಂದ ಹಾರ್ಟ್ ಅಟ್ಯಾಕ್ ಆಗಿ ಮೃತಪಟ್ಟಿರುವುದು ಈತನ ವೈದಿಕ ವರದಿಯಲ್ಲಿ ದೃಢಪಟ್ಟಿರುತ್ತದೆ" ಎಂಬುದಾಗಿ ವರದಿಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಯಾವುದೇ ಅಧಿಕಾರಿ ಮತ್ತು ಸಿಬ್ಬಂದಿರವರ ಮೇಲೆ ಇಲಾಖೆಯ ವಿಚಾರಣೆ ಕೈಗೊಂಡಿರುವುದಿಲ್ಲ ಆದ್ದರಿಂದ ಯಾವುದೇ ಅಧಿಕಾರಿ ಮತ್ತು ಸಿಬ್ಬಂದಿರವರ ಮೇಲೆ ಇಲಾಖೆಯ ವಿಚಾರಣೆ ಕೈಗೊಂಡಿರುವುದಿಲ್ಲ. |
| 27. | ಜೆ.ಪಿ ನಗರ ಯುಡಿಆರ್:20/2020 ಉಮೇಶ ಬಿನ್ ನಂಜೇಗೌಡ 35 ವರ್ಷ, ವಾಸ ಬಾಗೇಶಪುರ ಗ್ರಾಮ, ಗಂಡಸಿ ಹೋಬಳಿ, ಅರಸಿಕೇರೆ ತಾಲ್ಲೂಕು, ಹಾಸನ ಜಿಲ್ಲೆ ಎಂಬಾತನನ್ನು ಜೆ.ಪಿ ನಗರ ಪೊಲೀಸ್ ಠಾಣಾ ಮೊ.ಸಂ. 20/2020 ಕಲಂ. 454-457-380 ಐ.ಪಿ.ಸಿ. ಪ್ರಕರಣದಲ್ಲಿ ದಸ್ತಗಿರಿ ಮಾಡಿದ್ದು, ದಿನಾಂಕ:07/07/2020 ರಂದು ಜೆ.ಪಿ ನಗರದ ಆಸ್ಟರ್ ಆರ್.ವಿ ಆಸ್ಪತ್ರೆಯ ಐಸಿಯು ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಿಕಿತ್ಸೆ ಫಲಕಾರಿಯಾಗದೆ ಮಧ್ಯಾಹ್ನ 03:30 ಗಂಟೆಗೆ ಮೃತಪಟ್ಟಿರುವುದಾಗಿ ಆಸ್ಟರ್ ಆರ್.ವಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ದೃಢಪಡಿಸಿ, ಎಂ.ಎಲ್.ಸಿ, ಡಿಸ್ಚಾರ್ಜ್ ಸಮ್ಮರಿ ಮತ್ತು ಡೆತ್ ಸರ್ಟಿಫಿಕೇಟ್ ಅನ್ನು ನೀಡಿದ್ದು, ಸದರಿ ದಾಖಲೆಗಳಲ್ಲಿ ಮೃತ ಉಮೇಶನ ಮರಣದ ಕಾರಣವನ್ "MULTI ORGAN DYSFUNCTION,COVID POSITIVE PNEUMONIA, RIGHT LOWER LIMB CELLULITIS, SEVERE SEPSIS" ಎಂದು ನಮೂದಿಸಿರುತ್ತಾರೆ. ದಿನಾಂಕ 23/07/2020 ರೀತ್ಯಾ ಜೆ.ಪಿ.ನಗರ ಪಿ.ಎಸ್. ಯು.ಡಿ.ಆರ್. ನಂ.11/2020 ಕಲಂ 174 ಸಿ.ಆರ್.ಪಿ.ಸಿ. ಪ್ರಕರಣ ದಾಖಲಿಸಿರುತ್ತೆ. ಸದರಿ ಕಡತವನ್ನು ಸಿ.ಐ.ಡಿ. ಕಚೇರಿ ಆದೇಶ ಸಂ.13/ಅಪರಾಧ/ಹೆಚ್&ಬಿ/ಸಿಐಡಿ/2020 ದಿನಾಂಕ 23/07/2020 ರೀತ್ಯಾ ಕಡತವನ್ನು ಮುಂದಿನ ತನಿಖೆಗೆ ಸಿ.ಐ.ಡಿ.ಗೆ ವರ್ಗಾವಣೆ ನೀಡಿರುತ್ತೆ. | "ಬಿ" ಅಂತಿಮ ವರದಿ ಸಲ್ಲಿಸಿರುವುದರಿಂದ ಶಿಸ್ತು ಕ್ರಮ ಜರುಗಿಸಿರುವುದಿಲ್ಲ. | ಸಿಐಡಿ ಯಿಂದ ವಿಚಾರಣೆ ನಡೆದು ಮಾನ್ಯ ಎಸ್‌ಡಿಎಂ ನ್ಯಾಯಾಲಯಕ್ಕೆ "ಬಿ" ಅಂತಿಮ ವರದಿಯನ್ನು ನಿವೇದಿಸಿಕೊಂಡಿರುತ್ತಾರೆ |
| 28. | ವಿದ್ಯಾರಣ್ಯಪುರ ಪೊಲೀಸ್ ಠಾಣೆ ಯುಡಿಆರ್ ಸಂ:12/2021, ಕಲಂ:174(ಸಿಆರ್ ಪಿಸಿ) ಮೊ ಸಂ:52/2021 ಕಲಂ 224 ಐಪಿಸಿ.-<br><br>ಹನುಮಂತನಗರ ಪೊಲೀಸ್ ಠಾಣೆಯ ಮೊ.ಸಂ. 245/2020 ಕಲಂ 420,417,418,465,468,471 ಐಪಿಸಿ ಪ್ರಕರಣದಲ್ಲಿ ಆರೋಪಿಯಾದ ಸಿದ್ದಲಿಂಗಸ್ವಾಮಿ ಬಿನ್ ಲೇಟ್ ಸಿದ್ದಪ್ಪ 63 ವರ್ಷ ನಂ 533, ವಿವೇಕನಂದ | ಶ್ರೀ ಮಂಜುನಾಥ್ ದಡ್ಡಿಮನಿ ಪಿಎಸ್ಐ, ರವಿಕುಮಾರ್ ಹೆಚ್‌ಸಿ, ಮೃತ್ಯಂಜಯ ಹೆಚ್‌ಸಿ ಮತ್ತು ಉಮೇಶ ಮುತ್ತಗಿ ಪಿಸಿ | ತನಿಖೆಯಲ್ಲಿ ತಿಳಿದು ಬಂದಂತೆ ಸಿದ್ಲಿಂಗಸ್ವಾಮಿ ಈ ತನ್ನನು ಹನುಮಂತ ನಗರ ಪೊಲೀಸ್ ಠಾಣೆ ಮೊ ಸಂ:245/2020ರ ಪ್ರಕರಣದ ತನಿಖೆಯಲ್ಲಿ ಸಿಐಡಿ ಇಂದ ದಿನಾಂಕ:25.11.2021ರಂದು ಅಂತಿಮ ವರದಿ ಸಲ್ಲಿಸಲಾಗಿದೆ<br>ನಿರ್ಲಕ್ಷ್ಯತೆ ವಹಿಸಿದ ಶ್ರೀ ಮಂಜುನಾಥ್ ದಡ್ಡಿಮನಿ ಪಿಎಸ್ಐ, |

| | | | |
|---|---|---|---|
| | ನಗರ, ಟಿ.ನರಸಿಪುರ ತಾಲ್ಲುಕು, ಮೈಸೂರುಜಿಲ್ಲೆ. ಈತನನ್ನು ದಿನಾಂಕ 24/2/2021 ರಂದು ಸಂಜೆ 5:30 ಗಂಟೆಯಲ್ಲಿ ದಸ್ತಗಿರಿ ಮಾಡಿ ಸದರಿ ಪ್ರಕರಣದಲ್ಲಿ ತನಿಖೆಗಾಗಿ ಮಾನ್ಯ ನ್ಯಾಯಾಲಯದಲ್ಲಿ ಹಾಜರುಪಡಿಸಿ ದಿನಾಂಕ 25/2/2021 ರಿಂದ 4/3/2021 ರವರೆಗೆ ಪೊಲೀಸ್ ಬಂಧನಕ್ಕೆ ಪಡೆದು ತನಿಖೆಗಾಗಿ ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ಈತನ ಮನೆ ಇರುವ ಸ್ಥಳ ಮನೆ ನಂ 10/35 ಎಎಂಎಸ್ ಲೇಔಟ್ ವಿದ್ಯಾರಣ್ಯಪುರ ಬೆಂಗಳೂರು ಇಲ್ಲಿಗೆ ತನಿಖೆಗಾಗಿ ಕರೆದುಕೊಂಡು ಹೋದಾಗ ಆರೋಪಿಯು ಪೊಲೀಸ್ ಅಭಿರಕ್ಷೆಯಿಂದ ತಪ್ಪಿಸಿಕೊಂಡು ಮೇಲ್ಮಂಡ ಸ್ಥಳದ ಮನೆಯಿಂದ ಜಿಗಿದು ಮೃತಪಟ್ಟಿರುತ್ತಾನೆ. ಈ ಕುರಿತು ಪಿಎಸ್‌ಐ ಮಂಜುನಾಥ ದಡ್ಡಿಮನಿ ರವರು ವಿದ್ಯಾರಣ್ಯ ಪುರ ಪೊಲೀಸ್ ಠಾಣೆಗೆ ದೂರು ನೀಡಿದ ಮೇರೆಗೆ ಮೊ.ಸಂ. 52/2021 ಕಲಂ 224 ಐಪಿಸಿ ಪ್ರಕಾರ ಕೇಸು ದಾಖಲು ಮಾಡಿಕೊಂಡಿರುತ್ತಾರೆ. ವಿದ್ಯಾರಣ್ಯಪುರ ಪೊಲೀಸ್ ಠಾಣೆಯ ಯುಡಿಆರ್ ನಂ 12/2021 ಕಲಂ 174 (3) (ಐಗಿ) ಸಿಆರ್‌ಪಿಸಿ ಪ್ರಕಾರ ಕೇಸು ದಾಖಲು ಮಾಡಿರುತ್ತಾರೆ. ಮೃತ ಸಿದ್ದಲಿಂಗಸ್ವಾಮಿ ಈತನ ಪಿಎಂ ಅನ್ನು ಬೋರಿಂಗ್ ಆಸ್ಪತ್ರೆಯಲ್ಲಿ ಮಾಡಿಸಿದ್ದು, ಪಿಎಂ ರಿಪೋರ್ಟ್ನಲ್ಲಿ " Abrarian measuring 1cm) ( 1cm present over top of right 2)obligencly placed abrasion measuring 14 ) ( 3cm Present over of upper half of right leg ಎಂದು ನಮೂದಿಸಿರುತ್ತಾರೆ ಸದರಿ ಪ್ರಕರಣವನ್ನು ಸಿ.ಐ.ಡಿ.ಗೆ ವರ್ಗಾವಣೆ ನೀಡಲಾಗಿರುತ್ತೆ. | | ರವಿಕುಮಾರ್ ಹೆಚ್‌ಸಿ, ಮೃತ್ಯಂಜಯ ಹೆಚ್‌ಸಿ ಮತ್ತು ಉಮೇಶ ಮುತ್ತಗಿ ಪಿಸಿ ರವರುಗಳನ್ನು ಅಮಾನತ್ತುಗೊಳಿಸಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ. |
| 29. | ಕೋಣನಕುಂಟೆ ಪೊಲೀಸ್ ಠಣೆ ಯುಡಿಆರ್ ಸಂ:29/2021, ಕಲಂ 174 ಸಿಆರ್‌ಪಿ<br><br>ದಿನಾಂಕ 14-04-2021 ರಂದು ಠಾಣಾ ಮೊ.ಸಂ.35/2021 ಕಲ: 420 ಐಪಿಸಿ ಕೇಸಿನಲ್ಲಿ ದಸ್ತಗಿರಿ ಮಾಡಲಾಗಿದ್ದ ಆರೋಪಿ ಮಲ್ಲಿಕಾರ್ಜುನ ಈತನು ಹೊಟ್ಟೆ ನೋವು ಎಂದು ತಿಳಿಸಿದ ಮೇರೆಗೆ, ಆಸ್ಟ್ರಾ ಸೂಪರ್ ಸ್ಪೆಷಲ್ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದ ದಿನಾಂಕ: 15-04-2021 ರಂದು ಮೃತಪಟ್ಟಿರುತ್ತಾನೆ. | ಪೊಲೀಸ್ ಅಧಿಕಾರಿಗಳ ವಿರುದ್ಧ ಆರೋಪವು ಮೇಲ್ನೋಟಕ್ಕೆ ಕಂಡು ಬಂದಿಲ್ಲ | ಪೊಲೀಸ್ ಅಧಿಕಾರಿಗಳ ವಿರುದ್ಧ ಆರೋಪವು ಮೇಲ್ನೋಟಕ್ಕೆ ಕಂಡು ಬಂದಿಲ್ಲವಾದ್ದರಿಂದ ಶಿಸ್ತು ಕ್ರಮ ಜರುಗಿಸಿರುವುದಿಲ್ಲ. |
| 30. | ದಿನಾಂಕ 02-08-2021 00-30 ರಂದು ಜೆ.ಸಿ. ನಗರ ಪೊಲೀಸ್ ಠಾಣೆ ಕ್ರೈಂ ನಂ: 123/2021 ಕಲಂ: 21.; ಎನ್.ಡಿ.ಪಿ.ಎಸ್. ಆಕ್ಟ್ ಪ್ರಕರಣದಜೆಸಿ ನಗರ ಪೊಲೀಸ್ ಠಾಣೆ ಯುಡಿಆರ್ ಸಂ:19/2021 ಕಲಂ 176 ಸಿಆರ್‌ಪಿಸಿ<br><br>ಆರೋಪಿತನಾದ ಕಾಂಗೋ ದೇಶದ ಪ್ರಜೆ ಶ್ರೀ ಶಿಂದನಿ ಜೋಯಲ್ ಮಾಲ್ @ ಜಾನ್ ಎಂಬುವರು ದಸ್ತಗಿರಿ ಮಾಡಿದ್ದು, ನಂತರ | ಪೊಲೀಸ್ ಅಧಿಕಾರಿಗಳ ವಿರುದ್ಧ ಆರೋಪವು ಮೇಲ್ನೋಟಕ್ಕೆ ಕಂಡು ಬಂದಿಲ್ಲ | ವೈದ್ಯರು ಪರೀಕ್ಷೆಯಲ್ಲಿ ಹೃದಯಾಘಾತದಿದಂದ ಮರಣಹೊಂದಿರುವದಾಗಿ ವರದಿ ನೀಡಿರುವುದರಿಂದ ಪೊಲೀಸ್ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಿರುವುದಿಲ್ಲ. |

| | | | |
|---|---|---|---|
| | ದಿನಾಂಕ:02/08/2021 ರಂದು ಬೆಳಿಗ್ಗೆ 5:10 ಗಂಟೆ ಸುಮಾರಿಗೆ ಎಸ್.ಹೆಚ್.ಓ ರವರು ಶ್ರೀ ರಘುಪತಿ. ಪಿ.ಎಸ್.ಐ. ರವರಿಗೆ ಫೋನ್ ಮಾಡಿ "ಠಾಣೆಯಲ್ಲಿದ್ದ ಶಂಕಿತ ಶ್ರೀ ಜೋಯಲ್ ಮಾಲ್ @ ಜಾನ್ ರವರು ತನ್ನ ಎದೆಯನ್ನು ಹಿಡಿದುಕೊಂಡು ವಿಚಿತ್ರವಿಚಿತ್ರವಾಗಿ ಮಾತನಾಡುತ್ತಾ, ವಿಚಿತ್ರವಾಗಿ ವರ್ತಿಸುತ್ತಿರುವುದಾಗಿ ತಿಳಿಸಿದ್ದು, ಶ್ರೀ ರಘುಪತಿ. ಪಿ.ಎಸ್.ಐ. ರವರು ಕೂಡಲೇ ಹತ್ತಿರವಿದ್ದ ಚಿರಾಯು ಆಸ್ಪತ್ರೆಗೆ ಬೆಳಗಿನ ಜಾವ ಸುಮಾರು 5:30 ಗಂಟೆಗೆ ಚಿಕಿತ್ಸೆಗೆ ದಾಖಲಿಸಿರುತ್ತಾರೆ. ಅಲ್ಲಿ ವೈದ್ಯರು ಪ್ರಾಥಮಿತ ತನಿಖೆಗೆ ಒಳಪಡಿಸಿದ್ದು ಈತನಿಗೆ "ಇರುವುದು ತಿಳಿದುಬಂದಿರುತ್ತದೆ. ನಂತರ ವೈದ್ಯರು ಮತ್ತು ವೈದ್ಯಸಿಬ್ಬಂದಿಯವರು ಅನೇಕ ಬಾರಿ ಅ.ಕ.ಖ ಮತ್ತಿತರೇ ತುರ್ತು ಚಿಕಿತ್ಸೆಗಳನ್ನು ನೀಡಿರುತ್ತಾರೆ. ಬೆಳಿಗ್ಗೆ ಸುಮಾರು 6:45 ಗಂಟೆಗೆ ವೈದ್ಯರು ಸದರಿ ವ್ಯಕ್ತಿಯು ಚಿಕಿತ್ಸೆಗೆ ಸ್ಪಂದಿಸದೇ, ಚಿಕಿತ್ಸೆ ಫಲಕಾರಿಯಾಗದೇ ಹೃದಯ ಸಂಬಂಧಿಸಿದ ಕಾಯಿಲೆಯಿಂದ ಮೃತಪಟ್ಟಿರುತ್ತಾನೆಂದು ತಿಳಿಸಿರುತ್ತಾರೆ. ಈ ಬಗ್ಗೆ ಪಿ.ಎಸ್.ಐ. ರಘುಪತಿರವರು ವರದಿ ನೀಡಿದ್ದು ಜೆ.ಸಿ. ನಗರ ಪೊಲೀಸ್ ಠಾಣಾ ಯು.ಡಿ.ಆರ್. ನಂಬರ್ 19/21 ಕಲಂ:-176 ಸಿ.ಆರ್.ಪಿ.ಸಿ. ಪ್ರಕಾರ ಪ್ರಕರಣ ದಾಖಲಾಗಿರುತ್ತದೆ. | | |
| 31. | ಹಲಸೂರು ಗೇಟ್ ಪೊಲೀಸ್ ಠಾಣೆ ಮೊ ಸಂ:99/2022, ಕಲಂ 353, 224 ಐಪಿಸಿ ಪೊಲೀಸ್ ಠಾಣೆ ದಿನಾಂಕ 13-04-2022 ರಂದು ಆರೋಪಿಯಾದ ಜತಿನ್ ಗೌಡ ಇತನು ಪೊಲೀಸ್ ಅಭಿರಕ್ಷೆಯಿಂದ ತಪ್ಪಿಸಿಕೊಂಡು, ಸಿಟಿ ಸಿವಿಲ್ ಕೋರ್ಟ್ ನ 5ನೇ ಮಹಡಿಯಿಂದ ದುಮುಕಿ, ಮೃತಪಟ್ಟಿರುತ್ತಾನೆಂದು ಕೊಟ್ಟ ದೂರು. | ಶ್ರೀ ಗಣೇಶ್ ಎಪಿಸಿ-2058, ಶ್ರೀ ಓಬಳೇಶ್ ಎಪಿಸಿ, ಬಲವಂತ ಗುಜನಟ್ಟಿ ಎಪಿಸಿ, ಶ್ರೀ ಶಣ್ಮಗಪ್ಪ ಎಪಿಸಿ , ಶ್ರೀಧರ ಎಪಿಸಿ1815, ಶ್ರೀ ವಸಂತ ಎಪಿಸಿ, | ಇವರುಗಳನ್ನು ಅಮನತ್ತು ಮಾಡಿ ನಂತರ ಶಿಸ್ತು ಕ್ರಮ ಜರುಗಿಸಿವಾಷಿಕ ವೇತನ ಬಡ್ತಿಯನ್ನು ಮುಂದೂಡಲಾಗಿದೆ. ಹಾಗೂ ಅಮಾನತ್ತಿನ ಅವಧಿಯನ್ನು ಅಮಾಣತ್ತೆಂದು ಪರಿಗಣಿಸಿ ಆದೇಶಿಸಲಾಗಿದೆ. |
| 32. | ಮೈಸೂರು ಜಿಲ್ಲೆಯ ಹುಣಸೂರು ಗ್ರಾಮಾಂತರ ಜಿಲ್ಲೆ ಪೊಲೀಸ್ ಠಾಣೆ ಮೊ.ಸಂ. 222/2015 ಕಲಂ 302. 109 ಐಪಿಸಿ<br><br>ಹುಣಸೂರು ಗ್ರಮಾಂತರ ಪೊಲೀಸ್ ಠಾಣೆಯ ಪೊಲೀಸ್‌ರ ಅಭಿರಕ್ಷೆಯಲ್ಲಿ ಮೃತಪಟ್ಟಿದ್ದು, ಕೊಲೆ ಮಾಡಿರುತ್ತಾನೆಂದು ದೂರು ನೀಡಿರುತ್ತಾರೆ. | ಲೋಕೇಶ್, ಪಿಎಸ್ಐ ಮತ್ತು ಇತರೆ 08 ಜನ ಪೊಲೀಸ್ ಸಿಬ್ಬಂದಿಗಳು | ತನಿಖಾ ಕಾಲದಲ್ಲಿ ಮೃತನ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿರುವುದು ದೃಢಪಟ್ಟ ಮೇರೆಗೆ ಆರೋಪಿ ಲೋಕೇಶ್, ಪಿಎಸ್ಐ ಮತ್ತು ಇತರೆ 08 ಜನ ಪೊಲೀಸ್ ಸಿಬ್ಬಂದಿಗಳ ವಿರುದ್ಧ ದಿನಾಂಕ: 15.12.2020 ರಂದು ಕಲಂ 109, 114, 217, 218, 302, 342, 504,506, 509 354 ರೆ/ವಿ 34 ಐಪಿಸಿ ರೀತ್ಯಾ ಆರೋಪ ಪಟ್ಟಿಯನ್ನು ಸಲ್ಲಿಸಿದ್ದು, ಎಸ್.ಸಿ. ನಂ. 106/2021 ರಲ್ಲಿ ವಿಚಾರಣೆ ನಡೆಯುತ್ತಿರುತ್ತದೆ. |
| 33. | ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ಪೊಲೀಸ್ ಠಾಣೆ ಯುಡಿಆರ್. ನಂ. 28/2016, 174 ಸಿಆರ್‌ಪಿಸಿ,<br><br>ಪ್ರದೀಪ್ ತಂದೆ ಚಂದ್ರಶೇಖರಯ್ಯ, ಮೃತನು ಪೊಲೀಸ್ ರ ಅಭಿರಕ್ಷೆಯಲ್ಲಿರುವಾಗ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದರ | ಮೂರ್ತಿ, ಪಿಎಸ್ಐ ಮತ್ತು ರವಿ , ಸಿಹೆಚ್‌ಸಿ-140 | ಯು.ಡಿ.ಆರ್. ಪ್ರಕರಣದ ತನಿಖೆಯನ್ನು ಕೈಗೊಂಡ ಸಿಐಡಿ ತನಿಖಾಧಿಕಾರಿಗಳು ಮೃತನಿಗೆ ತರೀಕೆರೆ ಪೊಲೀಸ್‌ರು ಅಕ್ರಮ ಬಂಧನದಲ್ಲಿಟ್ಟು ಹಲ್ಲೆ ಮಾಡಿರುವುದು ದೃಢಪಟ್ಟ ಮೇರೆಗೆ ಪೊಲೀಸ್ ಅಧಿಕಾರಿಗಳ ವಿರುದ್ಧ ಮೊ.ಸಂ. 176/2019 ಕಲಂ 342, 324, 306, 465, 471, 474, 330 ರೆ/ವಿ 34 ಐಪಿಸಿ ಪ್ರಕರಣ ದಾಖಲಿಸಿದ್ದು, |

| | | | |
|---|---|---|---|
| | ಸಲುವಾಗಿ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ ಇತ್ಯಾದಿ. | | ಮೂರ್ತಿ, ಪಿಎಸ್ಐ ಮತ್ತು ರವಿ , ಸಿಹೆಚ್‌ಸಿ-140 ರವರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು ವಿಚಾರಣೆಯಲ್ಲಿರುತ್ತದೆ. |
